4. ಸಿಪಿಐ(ಎಂ) ಪಕ್ಷದ ಅಭಿಪ್ರಾಯದಂತೆ, ಇದು ಚುನಾವಣಾ ಸುಧಾರಣಾ ಪ್ರಕ್ರಿಯೆಯ ಒಂದು ಸಣ್ಣ ಅಂಶ. ಆದ್ದರಿಂದ ನ್ಯಾಯಾಂಗ ಇದನ್ನು ಪ್ರತ್ಯೇಕವಾಗಿ ಪರಿಗಣಿಸುವ ಬದಲು ಇಡೀ ಚುನಾವಣಾ ಪ್ರಕ್ರಿಯೆ ಸುಧಾರಣೆಯ ಒಂದು ಭಾಗವಾಗಿ ಪರಿಗಣಿಸಬೇಕು. ಅವರ ಬಲಕ್ಕೆ ಅನುಗುಣವಾಗಿ ಪ್ರಾತಿನಿಧ್ಯ, ಹಣ ಮತ್ತು ತೋಳ್ಬಲವನ್ನು ನಿಯಂತ್ರಿಸಲು ತುರ್ತು ಕ್ರಮಗಳನ್ನು ಸಂಸತ್ತು ಚರ್ಚಿಸಿ ಅದನ್ನು ಜಾರಿಗೆ ತರಬೇಕು.

5. ಮತಯಂತ್ರಗಳಲ್ಲಿ ಮೇಲ್ಕಂಡ ಯಾರೂ ಅಲ್ಲ ಎಂಬ ಆಯ್ಕೆಯನ್ನು ನೀಡುವುದಕ್ಕೆ ಯಾವ ಮತದಾನ ಮೌಲ್ಯವೂ ಇಲ್ಲ. ನೋಟಾ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡರೂ, ಉಳಿದ ಮತಗಳಲ್ಲಿ ಅತಿಹೆಚ್ಚು ಮತವನ್ನು ಗಳಿಸಿದ ಅಭ್ಯರ್ಥಿಯನ್ನು ವಿಜೇತ ಅಭ್ಯರ್ಥಿ ಎಂದು ಘೋಷಿಸಲಾಗುತ್ತದೆ. ಆದ್ದರಿಂದ ಇದರಿಂದ ಯಾವ ಪರಿಣಾಮಕಾರಿ ಅಥವಾ ಧನಾತ್ಮಕ ಪರಿಣಾಮವೂ ಸಾಧ್ಯವಿಲ್ಲ.

ಸುಪ್ರೀಂಕೋರ್ಟಿನ ಈ ಐತಿಹಾಸಿಕ ತೀರ್ಪು ಖಂಡಿತಾ ಸ್ವಾಗತಾರ್ಹ ಬೆಳವಣಿಗೆ. ಇದು ಖಂಡಿತವಾಗಿಯೂ ನಮ್ಮ ವ್ಯವಸ್ಥೆ ಬಲಗೊಳ್ಳಲು ಕಾರಣವಾಗುತ್ತದೆ. ಇದೀಗ ನಮ್ಮ ಶಾಸನಬದ್ಧ ಸಂಸ್ಥೆಗಳು ಅವುಗಳ ಮೇಲಿನ ನಂಬಿಕೆಯನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕು. ಇದು ರಾಜಕೀಯ ಭ್ರಷ್ಟಾಚಾರವನ್ನು ಬುಡಸಮೇತ ಕಿತ್ತೊಗೆಯಲು ಮತ್ತು ಇದರ ವಿರುದ್ಧ ಜನಜಾಗೃತಿಗೆ ಇದು ಮಹತ್ವದ ಹೆಜ್ಜೆಯಾಗಲಿದೆ. ಇದನ್ನು ಸಾಧಿಸಲು ಕೇವಲ ಮೌಲ್ಯಾಧರಿತ ಶಿಕ್ಷಣ ವ್ಯವಸ್ಥೆಯಿಂದಷ್ಟೇ ಸಾಧ್ಯ. ಆಗ ಮಾತ್ರ ನಾಗರಿಕರಲ್ಲಿ ಒಂದು ಜವಾಬ್ದಾರಿ ಮತ್ತು ಕರ್ತವ್ಯ ಪ್ರಜ್ಞೆಯನ್ನು ಮೂಡಿಸುವುದು ಸಾಧ್ಯವಾಗಲಿದೆ. ಇದು ಸಾಧ್ಯವಾಗುವುದು, ಇಡೀ ರಾಜಕೀಯ ವ್ಯವಸ್ಥೆ ತಾನಾಗಿಯೇ ಬದಲಾವಣೆಯಾದಾಗ ಮಾತ್ರ. ಅಲ್ಲದೇ ಪ್ರತಿಯೊಬ್ಬ ಮತದಾರ ಕೂಡಾ ಸುಶಿಕ್ಷಿತರಾಗಿ, ಅವರ ಹಕ್ಕು ಮತ್ತು ಕರ್ತವ್ಯಗಳನ್ನು ಸಮರ್ಪಕವಾಗಿ ತಿಳಿದುಕೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ. ಒಬ್ಬರಿಗೆ ಇರುವ ವೈಯಕ್ತಿಕ ಬದ್ಧತೆ ಅಥವಾ ಹೊಣೆಗಾರಿಕೆಯನ್ನು ಪೂರ್ಣಗೊಳಿಸಬೇಕಾದರೆ ಆತ ರಾಷ್ಟ್ರೀಯ ನೀತಿ ನಿರೂಪಣೆಯ ಬಗ್ಗೆ ಸೂಕ್ಷ್ಮತೆಯನ್ನು ಹೊಂದಿರಬೇಕಾಗುತ್ತದೆ.

## 31. ಬೌದ್ಧಿಕ ಆಸ್ತಿಹಕ್ಕು

ಅಬೋಟ್ ಕಂಪನಿಯ ಮಾರುಕಟ್ಟೆ ಪ್ರಗತಿ 2005ರಿಂದ 2012ರ ಅವಧಿಯಲ್ಲಿ ಶೇಕಡ 183ರಷ್ಟು ಹೆಚ್ಚಿದೆ. ಆಂತರಿಕ ಔಷಧ ಮಾರುಕಟ್ಟೆಯಲ್ಲಿ ಅದು ಶೇಕಡ 2.3 ಪಾಲು ಹೊಂದಿದ್ದ ಅದು ಈ ಅವಧಿಯಲ್ಲಿ ಶೇಕಡ 7ರಷ್ಟು ಪಾಲನ್ನು ಹೆಚ್ಚಿಸಿಕೊಂಡಿದೆ. ಫಿಬಿಝುರ್ ಮತ್ತು ವ್ಯಥ್‌ಬಿಎಸ್ಸಿಯ ಒಟ್ಟು ಮಾರುಕಟ್ಟೆ ಪಾಲು 2.5 ಶೇಕಡದಿಂದ ಕ್ರಮವಾಗಿ 3.1 ಮತ್ತು 3.2 ಶೇಕಡಕ್ಕೆ ಹೆಚಿದೆ. ಎಂಎಸ್‌ಡಿ ಮತ್ತು ಫುಲ್‌ಫೋರ್ಡ್ ಮಾರುಕಟ್ಟೆ ಪಾಲು ಶೇಕಡ 0.42ರಿಂದ 1.10ಕ್ಕೆ ಹೆಚ್ಚಿದೆ. ಐಪಿಎ ಪ್ರಕಾರ, ಅಮೆರಿಕ ಹೇಳುವಂತೆ, ಭಾರತದ ಪೇಟೆಂಟ್ ಕಾಯ್ದೆಯ ಸೆಕ್ಷನ್ 3 (ಡಿ) ಟ್ರಿಪ್ಸ್ ಒಪ್ಪಂದದ ಉಲ್ಲಂಘನೆಯಾಗಿದ್ದರೆ, ವ್ಯಾಜ್ಯ ಪರಿಹಾರ ವ್ಯವಸ್ಥೆಯಲ್ಲಿ ಅದನ್ನು ಪ್ರಶ್ನಿಸಬಹುದಾಗಿದೆ. ವಾಸ್ತವವಾಗಿ ಭಾರತದ ಪೇಟೆಂಟ್ ಕಾಯ್ದೆಯಲ್ಲಿ 2005ರಿಂದಲೂ ಯಾವ ಬದಲಾವಣೆಯೂ ಆಗಿಲ್ಲ ಮತ್ತು ಇದು ಟ್ರಿಪ್ಸ್ ಒಪ್ಪಂದದ ಅಗತ್ಯತೆಗಳಿಗೆ ಅನುಗುಣವಾಗಿದೆ.

ಭಾರತದ ಪೇಟೆಂಟ್ ಕಾಯ್ದೆಯು ತಾರತಮ್ಯದಿಂದ ಕೂಡಿದೆ ಎಂಬ ಅಮೆರಿಕದ ವಾದವನ್ನು ಭಾರತದ ಫಾರ್ಮಸ್ಯೂಟಿಕಲ್ ಅಲೈನ್ಸ್ (ಐಪಿಎ) ವಿಶ್ವ ವ್ಯಾಪಾರ ಸಂಸ್ಥೆಯ ವ್ಯಾಜ್ಯ ಪರಿಹಾರ ವ್ಯವಸ್ಥೆಯಲ್ಲಿ ಪ್ರಶ್ನಿಸಿದೆ. ವಾಸ್ತವವಾಗಿ ಭಾರತದಲ್ಲಿ 2005ರಿಂದೀಚೆಗೆ ಹಲವಾರು ಅಮೆರಿಕ ಮೂಲದ ಔಷಧ ಕಂಪನಿಗಳು ಆದಾಯವನ್ನು ಹೆಚ್ಚಿಸಿಕೊಂಡಿವೆ ಮತ್ತು ಮಾರುಕಟ್ಟೆಯಲ್ಲೂ ಮುನ್ನಡೆ ಸಾಧಿಸಿವೆ. ವಿಶ್ವ ವ್ಯಾಪಾರ ಸಂಸ್ಥೆಯ ಬೌದ್ಧಿಕ ಆಸ್ತಿ ಹಕ್ಕು ಒಪ್ಪಂದದ ಅನ್ವಯ ಭಾರತದ ಪೇಟೆಂಟ್ ಕಾಯ್ದೆಗೆ ತಿದ್ದುಪಡಿಯನ್ನು 2005ರಲ್ಲಿ ತರಲಾಗಿತ್ತು. ಅಬೋಟ್ ಕಂಪನಿಯ ಮಾರುಕಟ್ಟೆ ಪ್ರಗತಿ 2005ರಿಂದ 2012ರ ಅವಧಿಯಲ್ಲಿ ಶೇಕಡ 183ರಷ್ಟು ಹೆಚ್ಚಿದೆ. ಆಂತರಿಕ ಔಷಧ ಮಾರುಕಟ್ಟೆಯಲ್ಲಿ ಅದು ಶೇಕಡ 2.3 ಪಾಲು ಹೊಂದಿದ್ದ ಅದು ಈ ಅವಧಿಯಲ್ಲಿ ಶೇಕಡ 7ರಷ್ಟು ಪಾಲನ್ನು ಹೆಚ್ಚಿಸಿಕೊಂಡಿದೆ. ಫಿಬಿಝುರ್ ಮತ್ತು ವ್ಯಥ್‌ಬಿಎಸ್ಸಿಯ ಒಟ್ಟು ಮಾರುಕಟ್ಟೆ ಪಾಲು 2.5 ಶೇಕಡದಿಂದ ಕ್ರಮವಾಗಿ 3.1 ಮತ್ತು 3.2 ಶೇಕಡಕ್ಕೆ ಹೆಚಿದೆ. ಎಂಎಸ್‌ಡಿ ಮತ್ತು ಫುಲ್‌ಫೋರ್ಡ್ ಮಾರುಕಟ್ಟೆ ಪಾಲು ಶೇಕಡ 0.42ರಿಂದ 1.10ಕ್ಕೆ ಹೆಚ್ಚಿದೆ. ಐಪಿಎ ಪ್ರಕಾರ, ಅಮೆರಿಕ ಹೇಳುವಂತೆ, ಭಾರತದ ಪೇಟೆಂಟ್ ಕಾಯ್ದೆಯ ಸೆಕ್ಷನ್ 3 (ಡಿ) ಟ್ರಿಪ್ಸ್ ಒಪ್ಪಂದದ ಉಲ್ಲಂಘನೆಯಾಗಿದ್ದರೆ, ವ್ಯಾಜ್ಯ ಪರಿಹಾರ ವ್ಯವಸ್ಥೆಯಲ್ಲಿ ಅದನ್ನು ಪ್ರಶ್ನಿಸಬಹುದಾಗಿದೆ. ವಾಸ್ತವವಾಗಿ ಭಾರತದ ಪೇಟೆಂಟ್ ಕಾಯ್ದೆಯಲ್ಲಿ 2005ರಿಂದಲೂ ಯಾವ ಬದಲಾವಣೆಯೂ ಆಗಿಲ್ಲ ಮತ್ತು ಇದು ಟ್ರಿಪ್ಸ್ ಒಪ್ಪಂದದ ಅಗತ್ಯತೆಗಳಿಗೆ ಅನುಗುಣವಾಗಿದೆ. ಯಾವುದೇ ಹೊಸ ಅನುಶೋಧನೆಗಳಿಗೆ ಪೇಟೆಂಟ್ ಪಡೆಯಲು ಕಾಯ್ದೆಯಲ್ಲಿ ಅವಕಾಶವಿದೆ. ಆ ಮೂಲಕ 20 ವರ್ಷಗಳ ಕಾಲ ಆ ಉತ್ಪನ್ನವನ್ನು ತಯಾರಿಸಲು ಮತ್ತು ಅವುಗಳ ವಿತರಣೆಗೆ ಅವಕಾಶವಿದೆ. ಭಾರತೀಯ ಪೇಟೆಂಟ್ ಕಾಯ್ದೆಯು ತೀರಾ ನಿರ್ದಿಷ್ಟ ಮತ್ತು ಸಮಗ್ರ ಕಾಯ್ದೆಯಾಗಿದ್ದು ಮತ್ತು ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ. ಪೇಟೆಂಟ್ ನೀಡುವ ವಿಧಾನ ಕೂಡಾ ಅತ್ಯಂತ ಕಾನೂನುಬದ್ಧ ಮತ್ತು ಪಾರದರ್ಶಕ ಕ್ರಮವಾಗಿದ್ದು, ಇಡೀ ಪ್ರಕ್ರಿಯೆ ಮತ್ತು ನಿರ್ಧಾರ ಕಾನೂನಾತ್ಮಕ ವಿಮರ್ಶೆಗೆ ಬದ್ಧವಾಗಿರುತ್ತದೆ.

ಭಾರತದ ಪೇಟೆಂಟ್ ಕಾಯ್ದೆಯ ಸೆಕ್ಷನ್ 3(ಡಿ)ಗೆ ಅಮೆರಿಕ ಆಕ್ಷೇಪ ಎತ್ತಿದೆ ಎನ್ನುವುದು ಗಮನಾರ್ಹ ಅಂಶ. ಈ ಸೆಕ್ಷನ್ ಅನ್ವಯ ಈಗಾಗಲೇ ಇರುವ ಔಷಧಿಗಳಿಗೆ ಪೇಟೆಂಟ್ ನೀಡಬೇಕಾದರೆ, ಹಾಲಿ ಇರುವ ಉತ್ಪಾದನಾ ವಿಧಾನದಲ್ಲಿ ಗಣನೀಯ ಸುಧಾರಣೆಯನ್ನು ತಂದಿರಬೇಕು. ಅಮೆರಿಕ ವ್ಯಾಪಾರ ಪ್ರತಿನಿಧಿಗಳ 2013ರ ವಿಶೇಷ ವರದಿಯಲ್ಲಿ ಕೂಡಾ ಈ ಅಂಶವನ್ನು ಉಲ್ಲೇಖಿಸಲಾಗಿದ್ದು, "ಭಾರತ ತೆಗೆದುಕೊಂಡಿರುವ ಕ್ರಮ, ಕಡ್ಡಾಯ ಲೈಸನ್ಸಿಂಗ್ ಪಡೆಯುವಂತಿದೆ. ಇದರಿಂದ ತೊಂದರೆ ನೀಡುವ ಸಂಪ್ರದಾಯಕ್ಕೆ ನಾಂದಿಯಾಗಿದೆ" ಅಲ್ಲದೇ ಇದು ಭಾರತದಲ್ಲಿ ಅನುಶೋಧನೆ ವಾತಾವರಣದ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವಿಸಲು ಕಾರಣವಾಗಿದೆ" ಈಗಾಗಲೇ ಪೇಟೆಂಟ್


www.shikarat.com

ಪಡೆಯಲಾದ ಜೀವರಕ್ಷಕ ಔಷಧಿಗಳನ್ನು ಹೋಲುವ ಕಡಿಮೆ ಬೆಲೆಯ ಔಷಧಿಗಳನ್ನು ಭಾರತದ ಸ್ವದೇಶಿ ಕಂಪನಿಗಳು ಉತ್ಪಾದಿಸಲು ಅನುಮತಿ ನೀಡದಂತೆ ಸರ್ಕಾರದ ಮೇಲೆ ಅಮೆರಿಕನ್ ಕಂಪನಿಗಳು ಒತ್ತಡ ತಂದಿವೆ. ಹಸಿರು ತಂತ್ರಜ್ಞಾನ ವಲಯದಲ್ಲಿ ಕಡ್ಡಾಯ ಲೈಸನ್ಸಿಂಗ್ ಪಡೆಯುವಂತೆ ಮಾಡಿರುವ ಭಾರತದ ಕ್ರಮಕ್ಕೆ ಅಮೆರಿಕ ಮತ್ತು ಯೂರೋಪಿಯನ್ ದೇಶಗಳು ಬಲವಾದ ಆಕ್ಷೇಪಣೆ ವ್ಯಕ್ತಪಡಿಸಿವೆ. ಈ ಕಡ್ಡಾಯ ಲೈಸನ್ಸಿಂಗ್ ಪದ್ಧತಿಯಲ್ಲಿ ಸ್ಥಳೀಯ ಕಂಪನಿಗಳು ಪರಿಸರ ಸ್ನೇಹಿ ಉತ್ಪನ್ನಗಳಿಗೆ ಅನುರೂಪವಾದ ವಸ್ತುಗಳನ್ನು ಉತ್ಪಾಧಿಸಲು ಮತ್ತು ಮಾರಾಟ ಮಾಡಲು ಅವಕಾಶವಿದೆ. ಇನ್ನೊಂದೆಡೆ ಭಾರತವು ತನ್ನ ವಾದವನ್ನು ಸಮರ್ಥಿಸಿಕೊಂಡಿದ್ದು, ಕಡ್ಡಾಯ ಲೈಸನ್ಸ್ ನೀಡುವ ಕ್ರಮವು ಭಾರತದ ಹಕ್ಕುಗಳಿಗೆ ಅನುಗುಣವಾಗಿದೆ ಮತ್ತು ಆಂತರಿಕ ಕಾನೂನುಗಳ ವ್ಯಾಪ್ತಿಯಲ್ಲೇ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಇವುಗಳನ್ನು ಬಹುಪಕ್ಷೀಯ ಕಾನೂನುಗಳು ಈಗಾಗಲೇ ಒಪ್ಪಿಕೊಂಡಿವೆ ಎಂದು ಸ್ಪಷ್ಟಪಡಿಸಿದೆ.

ಭಾರತ ತಾರತಮ್ಯ ಪೇಟೆಂಟ್ ಪದ್ಧತಿಯನ್ನು ಅನುಸರಿಸುತ್ತಿದೆ ಎಂದು ನೊವರ್ಟಿಸ್ ಕಂಪನಿ ನೀಡಿದ ದೂರಿನ ಹಿನ್ನೆಲೆಯಲ್ಲಿ ಸರ್ಕಾರ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದು, ಸ್ವಿಜರ್‌ಲೆಂಡ್‌ನ ಪ್ರಮುಖ ಔಷಧ ಕಂಪನಿಯೂ ಸೇರಿದಂತೆ ಬಹುತೇಕ ಎಲ್ಲ ಜಾಗತಿಕ ಕಂಪನಿಗಳು ಭಾರತದ ನಿಯಮಾವಳಿಗಳಿಂದ ಲಾಭ ಪಡೆದಿದ್ದು, ಇದು ಈಗಾಗಲೇ ಮಂಜೂರು ಮಾಡಿದ ಶೇಕಡ 80ರಷ್ಟು ಪೇಟೆಂಟ್‌ಗಳನ್ನು ಮೂಲೆಗುಂಪು ಮಾಡಿರುವುದರಿಂದ ಸಾಧ್ಯವಾಗಿದೆ ಎಂದು ಸ್ಪಷ್ಟಪಡಿಸಿತ್ತು. ಕ್ಯಾನ್ಸರ್ ಔಷಧಿ ನೆಕ್ಸವರ್ ಸಂಬಂಧ ಕಂಪನಿ ನೀಡಿದ ದೂರನ್ನು 2013ರ ಏಪ್ರಿಲ್‌ನಲ್ಲಿ ಸುಪ್ರೀಂಕೋರ್ಟ್ ಕೂಡಾ ತಿರಸ್ಕರಿಸಿತು. 2012ರಲ್ಲಿ ಬಾಯೆರ್ ಕಾರ್ಪೊರೇಷನ್‌ನ ಕ್ಯಾನ್ಸರ್ ನಿರೋಧಕ ನೆಕ್ಸವರ್ ಬಗ್ಗೆಯೂ ಇದೇ ವಿವಾದ ಎದ್ದಿತ್ತು. ಈ ಪ್ರಕರಣದಲ್ಲಿ ಭಾರತ ಸರ್ಕಾರ ಹೈದರಾಬಾದ್ ಮೂಲಕ ನೆಟ್ಕೊ ಫಾರ್ಮಾ ಕಂಪನಿಗೆ, ಪೇಟೆಂಟ್ ಹೊಂದಿದ್ದ ಕಂಪನಿ ಮಾರಾಟ ಮಾಡುತ್ತಿದ್ದ ಬೆಲೆಗಿಂತ 30 ಪಟ್ಟು ಕಡಿಮೆ ಬೆಲೆಗೆ ಇದೇ ಮಾದರಿಯ ಔಷಧಿಯನ್ನು ಉತ್ಪಾದಿಸಲು ಮತ್ತು ಮಾರಾಟ ಮಾಡಲು ಅನುಮತಿ ನೀಡಿತ್ತು. ಭಾರತವು ಜೀವರಕ್ಷಕ ಔಷಧಿಗಳ ಉತ್ಪಾದನೆಯಲ್ಲಿ ವಿಶ್ವದಲ್ಲೇ ಅಗ್ರಗಣ್ಯ ರಾಷ್ಟ್ರವಾಗಿದ್ದು, ಭಾರತದ ಔಷಧ ಮಾರುಕಟ್ಟೆ 2005ರ ವೇಳೆಗೆ 600 ಕೋಟಿ ಡಾಲರ್ ಇದ್ದುದು ಇಂದು 1800 ಕೋಟಿ ಡಾಲರ್‌ಗಳಿಗೆ ಹೆಚ್ಚಿದೆ. 2020ರ ವೇಳೆಗೆ ಇದು 4500 ಕೋಟಿ ಡಾಲರ್‌ಗೆ ಬೆಳೆಯುವ ನಿರೀಕ್ಷೆ ಇದೆ.

2014ರಲ್ಲಿ ಪ್ರಮುಖ ನಾಲ್ಕು ಬ್ರಾಂಡೆಡ್ ಔಷಧಗಳಾದ ಸೈಂಬಲ್ತಾ, ನೆಕ್ಸಿಯಮ್, ಕ್ಲಾರಿನೆಕ್ಸ್ ಮತ್ತು ಸೆಲೆಬ್ರೆಕ್ಸ್ ಪಾಶ್ಚಾತ್ಯ ದೇಶಗಳಲ್ಲಿ ಪೇಟೆಂಟ್ ರಕ್ಷಣೆಯನ್ನು ಕಳೆದುಕೊಂಡವು. ಇದರ ಪಟ್ಟು ವಾರ್ಷಿಕ ಮಾರಾಟ ಮೌಲ್ಯ 1200 ಕೋಟಿ ಡಾಲರ್ ಇತ್ತು. 50 ಶತಕೋಟಿ ಡಾಲರ್ ಮೌಲ್ಯದ ಔಷಧ ಮಾರುಕಟ್ಟೆಯ ಲಾಭ ಪಡೆಯುವ ಸಲುವಾಗಿ ಭಾರತೀಯ ಔಷಧ ತಯಾರಿಕಾ ಕಂಪನಿಗಳಾದ ಗ್ಲೆನ್‌ಮಾರ್ಕ್, ಸನ್, ಡಾ.ರೆಡ್ಡೀಸ್ ಲ್ಯಾಬೊರೇಟರೀಸ್ ಮತ್ತು ಲ್ಯುಪಿನ್ ಮತ್ತಿತರ ಕಂಪನಿಗಳು ಪ್ರಾಥಮಿಕ ಬೆಟ್ಟಿಂಗ್‌ನಲ್ಲಿ ಫಸ್ಟ್ ಟೂ ಫೈಲ್ಸ್ ಹಕ್ಕು ಪ್ರತಿಪಾದಿಸಿದವು. ಜೀವರಕ್ಷಕ ಕಂಪನಿಯ ಹಿಂದಿನ ಪ್ಯಾರಾ–4 ಸಲ್ಲಿಕೆಯಿಂದ, ಹೊಸ ಪೇಟೆಂಟ್ ಪ್ರಶ್ನಿಸಲು ಅವಕಾಶವಿರುತ್ತದೆ. ಜತೆಗೆ ಹೊಸ ಜೀವರಕ್ಷಕ ವಿಧಾನದ ಔಷಧಿಯನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಆದರೆ ಈ ಔಷಧಿಯ ಸಂಶೋಧಕರು ಇದರ ವಿರುದ್ಧ ದಾವೆ ಹೂಡುವ ಅವಕಾಶವಿದ್ದು, ಪೇಟೆಂಟ್ ಅವಧಿ ಮುಗಿಯುವ ಕಂಪನಿ ಮಾತ್ರ ಆಗ ಪೈಪೋಟಿ ನೀಡುವ ಸ್ಪರ್ಧಿಯಾಗಿರುತ್ತದೆ.

**ವಿಪೊ**

ಐಪಿ ವ್ಯವಸ್ಥೆಯನ್ನು ಸಂರಕ್ಷಿಸಿಕೊಳ್ಳುವ ಪ್ರಯತ್ನ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅನಿವಾರ್ಯವಾಯಿತು. ಹೊಸ ಸಂಶೋಧನೆಗಳ ವಸ್ತುಪ್ರದರ್ಶನವನ್ನು 1873ರಲ್ಲಿ ವಿಯೆನ್ನಾದಲ್ಲಿ ವ್ಯವಸ್ಥೆಗೊಳಿಸಿದಾಗ ವಿದೇಶಿ ವಸ್ತುಪ್ರದರ್ಶನ ಸಂಸ್ಥೆಗಳು ಇದರಲ್ಲಿ ಭಾಗವಹಿಸಲು ನಿರಾಕರಿಸಿದವು. ಏಕೆಂದರೆ ಅವರ ಯೋಚನೆಗಳನ್ನು ಇತರರು ಕಳ್ಳತನ ಮಾಡಿ ಅದನ್ನು ವಾಣಿಜ್ಯವಾಗಿ ಶೋಷಣೆ ಮಾಡುವ ಭೀತಿ ಅವರನ್ನು ಕಾಡಿತು. ಆಗ ವಿಪ್ರೊ ತನ್ನ ಐಪಿ ವ್ಯವಸ್ಥೆ ಸಂರಕ್ಷಿಸಿಕೊಳ್ಳುವ ಹೊಸ ವಿಧಾನ ಕಂಡುಕೊಂಡಿತು.

1883ರಲ್ಲಿ ಪ್ಯಾರೀಸ್‌ನಲ್ಲಿ ನಡೆದ ಕೈಗಾರಿಕಾ ಆಸ್ತಿ ಸಂರಕ್ಷಣಾ ಸಮಾವೇಶ, ಒಂದು ಉತ್ಪನ್ನವನ್ನು ಕಂಡುಹಿಡಿದ ದೇಶದ ಬೌದ್ಧಿಕ ಆಸ್ತಿ ಹಕ್ಕನ್ನು ಮತ್ತೊಂದು ದೇಶ ಅನುಕರಿಸದಂತೆ ತಡೆಯುವ ನಿಟ್ಟಿನಲ್ಲಿ ಕೈಗೊಂಡ ಪ್ರಮುಖ ಹಾಗೂ ಪ್ರಥಮ ಅಂತಾರಾಷ್ಟ್ರೀಯ ಒಪ್ಪಂದ ಇದಾಗಿತ್ತು. 1884ರಲ್ಲಿ ಪ್ಯಾರಿಸ್ ಒಪ್ಪಂದಕ್ಕೆ 14 ದೇಶಗಳು ಸಹಿಮಾಡಿದವು. 1886ರಲ್ಲಿ ಕೃತಿಸ್ವಾಮ್ಯ ವ್ಯವಸ್ಥೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ಬಂತು. ಸಾಹಿತ್ಯಕ ಮತ್ತು ಕಲಾಕೃತಿಗಳ ಸಂರಕ್ಷಣೆ ಕುರಿತ ಬೆರ್ನ್ ಸಮಾವೇಶ ಅಸ್ತಿತ್ವಕ್ಕೆ ಬಂತು. ಇದರ ಸದಸ್ಯ ರಾಷ್ಟ್ರಗಳ ಜನರು ತಮ್ಮ ಹಕ್ಕಿನ ಬಗ್ಗೆ ಅಂತಾರರಾಷ್ಟ್ರೀಯ ವಲಯದಲ್ಲಿ ರಕ್ಷಣೆ ಪಡೆಯುವುದು ಇದರ ಪ್ರಮುಖ ಉದ್ದೇಶವಾಗಿತ್ತು. ಪ್ಯಾರೀಸ್ ಸಮಾವೇಶ ಮತ್ತು ಬೆರ್ನ್ ಸಮಾವೇಶದ ಹಿನ್ನೆಲೆಯಲ್ಲಿ ಆಡಳಿತಾತ್ಮಕ ಕಾರಣಗಳಿಗೆ ಅಂತಾರಾಷ್ಟ್ರೀಯ ಸಂಸ್ಥೆಗಳು ರಚನೆಯಾದವು. ಇದು ಮುಂದೆ ಸದಸ್ಯ ರಾಷ್ಟ್ರಗಳ ಸಭೆಗಳನ್ನು ಆಯೋಜಿಸಿತು. 1893ರಲ್ಲಿ ಎರಡು ಸಣ್ಣ ಬ್ಯೂರೊಗಳು ಜತೆಯಾಗಿ ಯುನೈಟೆಡ್ ಇಂಟರ್‌ನ್ಯಾಷನಲ್ ಬ್ಯೂರೋಸ್ ಆಫ್ ಪ್ರೊಟೆಕ್ಷನ್ ಆಫ್ ಇಂಟೆಲೆಕ್ಚುವಲ್ ಪ್ರಾಪರ್ಟಿ ಅಸ್ತಿತ್ವಕ್ಕೆ ಬಂತು. ಇದು ಬಿಐಆರ್‌ಪಿಐ ಎಂದೇ ಖ್ಯಾತವಾಯಿತು. ಸ್ವಿಜರ್‌ಲೆಂಡ್‌ನ ಬೆರ್ನ್‌ನಲ್ಲಿ ಇದರ ಕೇಂದ್ರಕಚೇರಿ ಇತ್ತು. ಇದು ಇಂದಿನ ವಿಪೊದ ಪೂರ್ವ ಸಂಸ್ಥೆ. 1960ರಲ್ಲಿ ಬಿಐಆರ್‌ಪಿಐ, ವಿಶ್ವಸಂಸ್ಥೆಯ ಕೇಂದ್ರಸ್ಥಾನವಾದ ನಿಜೀವಾಗೆ ಸ್ಥಳಾಂತರವಾಯಿತು. 1970ರಲ್ಲಿ ಅಂತಾರಾಷ್ಟ್ರೀಯ ಭೌದ್ಧಿಕ ಆಸ್ತಿ ಸಂಸ್ಥೆ ಅಸ್ತಿತ್ವಕ್ಕೆ ತರುವುದು ಅನಿವಾರ್ಯವಾದಾಗ ಬಿಐಆರ್‌ಪಿಐ ವಿಪೊ ಆಗಿ ಬದಲಾಯಿತು. ಇದರಲ್ಲಿ ಹಲವು ರಾಚನಿಕ ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ತರಲಾಯಿತು. ಜತೆಗೆ ವಿವಿಧ ಸದಸ್ಯರಾಷ್ಟ್ರಗಳಿಗೆ ಅನುಕೂಲವಾಗುವಂತೆ ಸಚಿವಾಲಯವನ್ನೂ ಆರಂಭಿಸಲಾಯಿತು. 1974ರಲ್ಲಿ ವಿಪೊ ವಿಶ್ವಸಂಸ್ಥೆಯ ವಿಶೇಷ ಏಜೆನ್ಸಿಯಾಗಿ ಬೆಳೆಯಿತು. ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳು ಗುರುತಿಸಿದ ಬೌದ್ಧಿಕ ಆಸ್ತಿಯನ್ನು ಸಂರಕ್ಷಿಸುವ ಹೊಣೆಯನ್ನು ವಹಿಸಲಾಯಿತು. ಇದಕ್ಕೆ ಎಲ್ಲ ಸದಸ್ಯರಾಷ್ಟ್ರಗಳು 1967ರ ಜುಲೈ 14ರಂದು ನಡೆದ ಅಂತಾರರಾಷ್ಟ್ರೀಯ ಸಮಾವೇಶದಲ್ಲಿ ಸಹಿ ಮಾಡಿದವು. ಹೊಸ ವ್ಯವಸ್ಥೆ 1970ರಲ್ಲಿ ಜಾರಿಗೆ ಬಂತು. ಬಳಿಕ 1979ರಲ್ಲಿ ಇದಕ್ಕೆ ತಿದ್ದುಪಡಿ ತರಲಾಯಿತು. ಇದರ ಕೇಂದ್ರ ಕಚೇರಿಗಳು ಜಿನೀವಾ ಮತ್ತು ಸ್ವಿಜರ್‌ಲೆಂಡ್‌ನಲ್ಲಿವೆ. ಈ ಸಂಸ್ಥೆಯ ಮಧ್ಯವರ್ತಿ ಅಧಿಕಾರಿಗಳು ಬ್ರುಸೆಲ್ಸ್, ಬೆಲ್ಜಿಯಂ, ಸಿಂಗಾಪುರ, ವಿಶ್ವಸಂಸ್ಥೆ, ನ್ಯೂಯಾರ್ಕ್, ವಾಷಿಂಗ್ಟನ್ ಡಿಸಿಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಭಾರತ ಕೂಡಾ ವಿಪೊ ಸದಸ್ಯರಾಷ್ಟ್ರ. ಇಂದು ವಿಪೊ 187 ಸದಸ್ಯರಾಷ್ಟ್ರಗಳನ್ನು ಹೊಂದಿದೆ. ಇದು ಸಮತೋಲಿತ ಮತ್ತು ಎಲ್ಲರಿಗೂ ಲಭ್ಯವಾಗುವ ಅಂತಾರಾಷ್ಟ್ರೀಯ ಬೌದ್ಧಿಕ ಆಸ್ತಿಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಇದರ ಅನ್ವಯ ಸೃಜನಶೀಲತೆಗೆ ಪ್ರೋತ್ಸಾಹಕಗಳಿರುತ್ತವೆ. ಇದು


www.shikarat.com

ಅನುಶೋಧನೆಗಳನ್ನು ಉತ್ತೇಜಿಸುತ್ತದೆ ಮತ್ತು ಆರ್ಥಿಕ ಅಭಿವೃದ್ಧಿಗೆ ಕೊಡುಗೆಯನ್ನು ನೀಡುತ್ತವೆ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುತ್ತವೆ. ವಿಪೋ ಪ್ರಮುಖವಾದ ಎರಡು ಗುರಿಗಳನ್ನು ಹೊಂದಿದೆ. ಮೊದಲನೆಯದು 2006ರ ಪರಿಷ್ಕೃತ ಟ್ರೇಡ್‌ಮಾರ್ಕ್ ಕಾನೂನು ಒಪ್ಪಂದ (ಸಿಂಗಾಪುರ ಒಪ್ಪಂದ)ದ ಅನ್ವಯ ಟ್ರೇಡ್‌ಮಾರ್ಕ್‌ಗಳನ್ನು ರಕ್ಷಿಸುವುದು. ಇದರ ಜತೆಗೆ ವಿಪೊ ಕಾಪಿರೈಟ್ ಒಪ್ಪಂದ ಹಾಗೂ ವಿಐಪಿಪಿ ಕ್ಷಮತೆ ಮತ್ತು ಚಿತ್ರಗಳ ಒಪ್ಪಂದವನ್ನು ಕಾಪಾಡುವುದೂ ಇದರ ಕಾರ್ಯವಾಗಿದೆ. ವಿಐಪಿಪಿ ಒಪ್ಪಂದವು ಡಿಜಿಟಲ್ ಯುಗದ ಬೆಳವಣಿಗೆಗಳಿಗೆ ಸಂಬಂಧಿಸಿದ್ದು.

**ವಿಪೊ ಭವಿಷ್ಯ**

ಫ್ರೆಂಡ್ ಆಫ್ ಡೆವಲಪ್‌ಮೆಂಟ್ ಎಂಬ ಹದಿನಾಲ್ಕು ದೇಶಗಳ ಒಕ್ಕೂಟ ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದಿದ್ದು, ಬ್ರೆಜಿಲ್ ಮತ್ತು ಅರ್ಜೆಂಟೀನಾ ಇದರ ನೇತೃತ್ವ ವಹಿಸಿವೆ. ಇತ್ತೀಚಿನ ವಿಶ್ವ ವ್ಯಾಪಾರ ಸಂಸ್ಥೆ ಒಪ್ಪಂದಗಳು ಹಾಗೂ ವಿಪೊ ಒಪ್ಪಂದಗಳು ಅಭಿವೃದ್ಧಿಶೀಲ ದೇಶಗಳಿಗೆ ಮಾರಕವಾಗಿವೆ. ಇದು ಅವುಗಳಿಗೆ ಆರ್ಥಿಕ ಮತ್ತು ಸಾಮಾಜಿಕವಾಗಿ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತವೆ ಎಂಬ ವಾದ ಮುಂದಿಟ್ಟಿವೆ. ಭವಿಷ್ಯದ ಯಾವುದೇ ಅಂತಾರಾಷ್ಟ್ರೀಯ ಒಪ್ಪಂದಗಳು ಅಭಿವೃದ್ಧಿ ನೀತಿಗೆ ಅನುಗುಣವಾಗಿರಬೇಕು ಎಂದು ವಾದಿಸಿವೆ. ವಿಪೊ ತನ್ನ ಕಡ್ಡಾಯ ಮತ್ತು ನೀತಿ ನಿರೂಪಣೆ ವ್ಯವಸ್ಥೆಯನ್ನು ಬದಲಾಯಿಸಬೇಕು ಮತ್ತು ಅದು ದೇಶಗಳಿಗೆ ನೀಡುವ ಸಲಹೆಯ ಪದ್ಧತಿ ಬದಲಾಗಬೇಕು. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತಂತ್ರಜ್ಞಾನ ವರ್ಗಾವಣೆಯಾಗುವಂಥ ನೀತಿಯನ್ನು ಜಾರಿಗೊಳಿಸಬೇಕು ಎನ್ನುವುದು ಎಫ್‌ಓಡಿ ವಾದವಾಗಿದೆ. ಬೌದ್ಧಿಕ ಆಸ್ತಿ ಎನ್ನುವುದು ಅಲ್ಲಿಗೇ ಅಂತ್ಯವಾಗಬಾರದು ಎಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆ. ಈ ವಾದಕ್ಕೆ ಆಫ್ರಿಕನ್ ದೇಶಗಳು ದನಿಗೂಡಿಸಿದ್ದು, ವಿಪೊ ಕಾರ್ಯಕ್ರಮಗಳಿಗೆ ಅಭಿವೃದ್ಧಿ ದೃಷ್ಟಿಕೋನ ನೀಡಬೇಕಾದ ಅಗತ್ಯವನ್ನು ಪ್ರತಿಪಾದಿಸಿವೆ. ಆದರೆ ಅಭಿವೃದ್ಧಿ ಹೊಂದಿದ ದೇಶಗಳು ಬೌದ್ಧಿಕ ಆಸ್ತಿ ಹಕ್ಕನ್ನು ಮತ್ತಷ್ಟು ಬಲಗೊಳಿಸುವಂತೆ ಆಗ್ರಹಿಸಿವೆ.

**ಭಾರತದ ನಿಲುವು**

ಭಾರತದ ನಿಲುವು ಎಂದರೆ ಅಭಿವೃದ್ಧಿಗೆ ಪೂರಕವಾದ ನಿಯಮಾವಳಿಯನ್ನು ಜಾರಿಗೊಳಿಸುವುದು. ಬೌದ್ಧಿಕ ಆಸ್ತಿಯ ಮಾಲೀಕರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಅದನ್ನು ಬಳಸುವವರ ಹಿತವನ್ನು ಬಲಿಕೊಡಬಾರದು ಎನ್ನುವುದು ಭಾರತದ ಸ್ಪಷ್ಟ ನಿಲುವು. ಗ್ರಾಹಕರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಯಾವುದೇ ಸಾರ್ವಜನಿಕ ನೀತಿಗಳನ್ನು ಜಾರಿಗೊಳಿಸಬೇಕು. ಪ್ರಾಥಮಿಕ ಹಂತದಲ್ಲಿ ಬೌದ್ಧಿಕ ಆಸ್ತಿಯ ರಕ್ಷಣೆ ಖಂಡಿತವಾಗಿಯೂ ಅನುಶೋಧನೆಯನ್ನು ಉತ್ತೇಜಿಸುತ್ತದೆ. ಆದರೆ ಬೌದ್ಧಿಕ ಆಸ್ತಿ ಮಾಲೀಕರಿಗೆ ಕಾನೂನಾತ್ಮಕ ಏಕಸ್ವಾಮ್ಯವನ್ನು ನೀಡಿದರೆ ಅದು ಸ್ಪರ್ಧಾತ್ಮಕ ಮಾರುಕಟ್ಟೆ ನೀತಿಗೆ ವಿರುದ್ಧವಾಗುತ್ತದೆ ಎನ್ನುವುದು ಭಾರತದ ನಿಲುವು.

**ಪೇಟೆಂಟ್ ನಿಯಮ ಏಕರೂಪತೆ**

ವಿಪೊ ಸ್ಥಾಯಿ ಸಮಿತಿಯ ಮುಂದೆ ಚರ್ಚೆಯ ಹಂತದಲ್ಲಿರುವ ಪೇಟೆಂಟ್ ಕಾನೂನುಗಳ ಏಕರೂಪತೆ ಕುರಿತ ವಿಷಯಗಳು ಈಗಾಗಲೇ ವಿಪೊ ಅಂತಾರಾಷ್ಟ್ರೀಯ ಸಮಿತಿ ಮುಂದಿರುವ ವಿಷಯಗಳ ಪುನರಾವರ್ತನೆಯಾಗುತ್ತದೆ ಎನ್ನುವುದು ಭಾರತದ ವಾದ. ಬೌದ್ಧಿಕ ಆಸ್ತಿ, ವಂಶಪಾರಂಪರ್ಯ ಸಂಪನ್ಮೂಲ, ಸಾಂಪ್ರದಾಯಿಕ ಜ್ಞಾನ ಮತ್ತು ಜಾನಪದ ಕುರಿತ ವಿಷಯ ಈಗಾಗಲೇ ಸಮಿತಿಯ ಮುಂದಿದೆ. ಅಭಿವೃದ್ಧಿಶೀಲ ರಾಷ್ಟ್ರಗಳು ಉತ್ತೇಜಿಸಿದ ಸಮಿತಿಯು ಈಗಾಗಲೇ ಅಸ್ತಿತ್ವದಲ್ಲಿದ್ದು, ಭಾರತವೂ ಇದರಲ್ಲಿ ಪ್ರಮುಖ ಪಾತ್ರ ವಹಿಸಿದೆ. ಭಾರತದ ಈ ಪ್ರಯತ್ನಕ್ಕೆ ಇಂಗ್ಲೆಂಡ್, ಆಸ್ಟ್ರಿಯಾ, ಚೀನಾ ಮತ್ತಿತರ ರಾಷ್ಟ್ರಗಳು ಬೆಂಬಲ ಸೂಚಿಸಿವೆ. ಆದರೆ ಅರ್ಜೆಂಟೀನಾ ಮತ್ತು ಬ್ರೆಜಿಲ್ ದೇಶಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿವೆ. ಜೀವವೈವಿಧ್ಯ ವಿಷಯಗಳ ಬಗ್ಗೆ ಸದಾ ಧ್ವನಿ ಎತ್ತುವ ಪೆರು ಕೂಡಾ ಈ ವಿಚಾರದಲ್ಲಿ ವಿಚಿತ್ರ ನಿಲುವು ತಳೆದಿದೆ. ಇದಕ್ಕೆ ಹೊರತಾಗಿ ಅಮೆರಿಕ ಪ್ರತ್ಯೇಕವಾಗಿ ಭಾರತದ ಪ್ರಯತ್ನದ ಬಗ್ಗೆ ಆಕ್ಷೇಪ ಎತ್ತಿದೆ.

**ಐಎಸ್‌ಎ ಮತ್ತು ಐಪಿಇಎ**

ಬೌದ್ಧಿಕ ಆಸ್ತಿ ವ್ಯವಸ್ಥೆಯನ್ನು ಬದಲಾಯಿಸಲು ಭಾರತ ನಡೆಸಿದ ಪ್ರಯತ್ನದ ಹಿನ್ನೆಲೆಯಲ್ಲಿ, ಭಾರತ ಮಂಡಿಸಿದ ವಾದಕ್ಕೆ ಅನುಗುಣವಾಗಿ ಅಂತಾರಾಷ್ಟ್ರೀಯ ಹುಡುಕಾಟ ಪ್ರಾಧಿಕಾರ (ಐಎಸ್‌ಎ) ಮತ್ತು ಅಂತಾರಾಷ್ಟ್ರೀಯ ಪ್ರಾಥಮಿಕ ಪರೀಕ್ಷಾ ಪ್ರಾಧಿಕಾರ (ಐಪಿಇಎ) ನೇಂಕ ಮಾಡಿದೆ. ಇದು ಭಾರತಕ್ಕೆ ಹಲವು ವಿಧದಲ್ಲಿ ನೆರವಾಗಲಿದೆ. ಐಎಸ್‌ಎ ಮತ್ತು ಐಪಿಇಎ ಮಾನ್ಯಮಾಡಿದ ಏಷ್ಯಾದ ಏಕೈಕ ಇಂಗ್ಲಿಷ್ ಮತನಾಡುವ ದೇಶ ಭಾರತವಾಗಿದ್ದು, ಎಲ್ಲ ಬೌದ್ಧಿಕ ಆಸ್ತಿ ಕುರಿತ ಅರ್ಜಿಗಳು ಭಾರತೀಯ ಪೇಟೆಂಟ್ ಕಚೇರಿಗೆ ಹುಡುಕಾಟ ಮತ್ತು ಪ್ರಾಥಮಿಕ ಪರೀಕ್ಷಾ ಉದ್ದೇಶಕ್ಕೆ ಬರಲಿವೆ. ಇದರಿಂದ ಪೇಟೆಂಟ್ ಕಚೇರಿ ವಿಧಿಸುವ ಶುಲ್ಕ ಭಾರತಕ್ಕೆ ಆದಾಯವಾಗಿ ಪರಿಣಮಿಸಲಿದೆ.

**ಭಾರತದ ಪ್ರಯತ್ನಗಳು**

1. ಭಾರತದಲ್ಲಿ ರಾಷ್ಟ್ರೀಯ ಬೌದ್ಧಿಕ ಆಸ್ತಿ ನಿರ್ವಹಣಾ ಸಂಸ್ಥೆ ಸ್ಥಾಪನೆಗೆ 2007ರ ಆಗಸ್ಟ್‌ನಲ್ಲಿ ನಾಗಪುರದಲ್ಲಿ ಶಿಲಾನ್ಯಾಸ ಮಾಡಲಾಯಿತು. ಇದು ಜಾಗತಿಕ ಗುಣಮಟ್ಟದ ಸಂಸ್ಥೆಯಾಗಿದ್ದು, ಈ ಕ್ಷೇತ್ರದಲ್ಲಿ ತರಬೇತಿ, ಸಂಶೋಧನೆ, ಶಿಕ್ಷಣ ನೀಡಲು ವ್ಯವಸ್ಥೆ ಮಾಡಲಿದೆ. ಇದು ಬೌದ್ಧಿಕ ಆಸ್ತಿ ಕುರಿಯ ಚಿಂತನ ವೇದಿಕೆಯಾಗಿ ವಿಶ್ವಮಟ್ಟದಲ್ಲಿ ಕಾರ್ಯ ನಿರ್ವಹಿಸಲಿದೆ. ಇದಕ್ಕಾಗಿ 20 ಕೋಟಿ ರೂಪಾಯಿಯ ಯೋಜನೆಗೆ ಅನುಮೋದನೆ ನೀಡಲಾಗಿದೆ.

2. ಕೈಗಾರಿಕಾ ವಿನ್ಯಾಸ ಕೇತ್ರದಲ್ಲೂ ಗಣನೀಯ ಪ್ರಗತಿ ಕಾಣುತ್ತಿದೆ. ದಾಖಲೆ ಪ್ರಮಾಣದ 5000 ಅರ್ಜಿಗಳು ಕಳೆದ ವರ್ಷ ಬಂದಿವೆ. ಭೌಗೋಳಿಕ ಪ್ರದೇಶ ಗುರುತಿಸುವಿಕೆ ಕ್ಷೇತ್ರದಲ್ಲಿ 46 ಸಂಸ್ಥೆಗಳು ನೋಂದಣಿಯಾಗಿವೆ. 100ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಡಾರ್ಜಿಲಿಂಗ್ ಚಹಾ, ಚಂದೇರಿ ಸೀರೆ, ಪೋಚಂಪಲ್ಲಿ ಇಕ್ತ್ ಮತ್ತು ಕಂಗಾರಾ ಚಹಾ.


www.shikarat.com

3. ಭಾರತ ಸರ್ಕಾರ ವಿನ್ಯಾಸ ಮಂಡಳಿಯನ್ನು ಆರಂಭಿಸಲು ಉದ್ದೇಶಿಸಿದ್ದು, ಭಾರತೀಯ ವಿನ್ಯಾಸವನ್ನು ಬ್ರಾಂಡ್ ಮಾಡಲು ಕೂಡಾ ಉದ್ದೇಶಿಸಿದೆ. ಮೂರು ವಿನ್ಯಾಸ ಸಂಸ್ಥೆಗಳನ್ನು ದಕ್ಷಿಣ, ಪೂರ್ವ ಹಾಗೂ ಉತ್ತರ ಭಾರತದಲ್ಲಿ ಆರಂಭಿಸಲು ಉದ್ದೇಶಿಸಿದ್ದು, ಈಗ ಅಹ್ಮದಾಬಾದ್‌ನಲ್ಲಿ ಇರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಮಾದರಿಯಲ್ಲೇ ಇವು ರೂಪುಗೊಳ್ಳಲಿವೆ.

4.ಮ್ಯಾಡ್ರಿಡ್ ಶಿಷ್ಟಾಚಾರವನ್ನು ಪಾಲಿಸಲು ಭಾರತ ಮುಂದಾಗಿದ್ದು, ಭಾರತ ಇದರ ಸದಸ್ಯತ್ವ ಪಡೆದಿರುವುದರಿಂದ ಭಾರತೀಯ ಕಂಪನಿಗಳು ತಮ್ಮ ಟ್ರೇಡ್‌ಮಾರ್ಕ್ ಏಕೈಕ ಅರ್ಜಿಯ ಮೂಲಕ ಇದನ್ನು ದಾಖಲಿಸಲು ಅನುಕೂಲವಾಗಲಿದೆ.

5. ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಎರಡನೇ ಹಂತದ ಆಧುನೀಕರಣ ಯೋಜನೆಯನ್ನು 300 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಈ ಯೋಜನೆಯಡಿ ಈಗಾಗಲೇ ಇರುವ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುವುದು. ಟ್ರೇಡ್‌ಮಾರ್ಕ್ ಕಚೇರಿಯನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಿ, ಅಂತಾರಾಷ್ಟ್ರೀಯ ಅಂಕಿ ಅಂಶಗಳನ್ನು ಸ್ವೀಕರಿಸಲು ವ್ಯವಸ್ಥೆ ಕಲ್ಪಿಸಲಾಗುವುದು. ಪೇಟೆಂಟ್ ಮತ್ತು ಟ್ರೇಡ್‌ಮಾರ್ಕ್ ಪರೀಕ್ಷಾ ಕ್ಷೇತ್ರದಲ್ಲಿ ಹಲವು ಮಂದಿ ತಜ್ಞರು ಲಭ್ಯರಿದ್ದು, ಟ್ರೇಡ್‌ಮಾರ್ಕ್ ಮತ್ತು ಬೌದ್ಧಿಕ ಆಸ್ತಿ ಹಕ್ಕು ಬಗ್ಗೆ ಕೈಗಾರಿಕೆ, ಶಿಕ್ಷಣ, ನ್ಯಾಯಾಂಗ, ಜಾರಿ ಸಂಸ್ಥೆಗಳು, ನೀತಿ ನಿರೂಪಕರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

6. ನಾಗಪುರದಲ್ಲಿ ರಾಷ್ಟ್ರೀಯ ಬೌದ್ಧಿಕ ಆಸ್ತಿ ನಿರ್ವಹಣಾ ಸಂಸ್ಥೆ ಸ್ಥಾಪನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇದು ಜಾಗತಿಕ ಗುಣಮಟ್ಟದ ಸಂಸ್ಥೆಯಾಗಿದ್ದು, ಈ ಕ್ಷೇತ್ರದಲ್ಲಿ ತರಬೇತಿ, ಸಂಶೋಧನೆ, ಶಿಕ್ಷಣ ನೀಡಲು ವ್ಯವಸ್ಥೆ ಮಾಡಲಿದೆ. ಇದು ಬೌದ್ಧಿಕ ಆಸ್ತಿ ಕುರಿಯ ಚಿಂತನ ವೇದಿಕೆಯಾಗಿ ವಿಶ್ವಮಟ್ಟದಲ್ಲಿ ಕಾರ್ಯ ನಿರ್ವಹಿಸಲಿದೆ. ಇದಕ್ಕಾಗಿ 20 ಕೋಟಿ ರೂಪಾಯಿಯ ಯೋಜನೆಗೆ ಅನುಮೋದನೆ ನೀಡಲಾಗಿದೆ.

7. ಐಎಸ್‌ಎ ಮತ್ತು ಐಪಿಇಎ: ಭಾರತದ ಪೇಟೆಂಟ್ ಕಚೇರಿಯನ್ನು ಪೇಟೆಂಡ್ ಸಹಕಾರ ಒಪ್ಪಂದಡಿಯಲ್ಲಿ ಮಾನ್ಯತೆ ನೀಡಲು ನಿರ್ಧರಿಸಲಾಗಿದೆ. ಇದರಿಂದ ಅಂತಾರಾಷ್ಟ್ರೀಯ ಹುಡುಕಾಟ ಪ್ರಾಧಿಕಾರ ಮತ್ತು ಅಂತಾರಾಷ್ಟ್ರೀಯ ಪ್ರಾಥಮಿಕ ಪರೀಕ್ಷಾ ಪ್ರಾಧಿಕಾರಕ್ಕೆ ಬರುವ ಅರ್ಜಿಗಳೆಲ್ಲ ಭಾರತದ ಪೇಟೆಂಟ್ ಕಚೇರಿಗೆ ಬರಲಿವೆ. ಇದರಿಂದ ಎಲ್ಲ ಶೋಧನಾ ವರದಿ ಮತ್ತು ಅವುಗಳ ನಾವೀನ್ಯ ಕುರಿತ ಪರಿಶೀಲನಾ ವರದಿಯನ್ನು ಭಾರತ ನೀಡಲಿದೆ.

8. ಮಶೇಲ್ಕರ್ ಸಮಿತಿ: ಸಿಎಸ್‌ಐಆರ್‌ನ ಮಾಜಿ ಮಹಾನಿರ್ದೇಶಕ ಡಾ.ಆರ್.ಕೆ.ಮಶಾಲ್ಕರ್ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ತಾಂತ್ರಿಕ ತಜ್ಞರ ಸಮಿತಿಯನ್ನು ರಚಿಸಿದ್ದು, ಎರಡು ವಿಷಯಗಳ ಪರಿಶೀಲನೆಗೆ ಸೂಚಿಸಿದೆ. ಮೊದಲನೆಯದು ಔಷಧ ಕಂಪನಿಗಳಿಗೆ ಪೇಟೆಂಟ್ ನೀಡುವ ಟ್ರಿಪ್ಸ್ ಅಧಿಕಾರದ ಬಗೆಗೆ ಹಾಗೂ ಇನ್ನೊಂದು ಪೇಟೆಂಟ್‌ನಿಂದ ಮೈಕ್ರೊ ಆರ್ಗಾನಿಸಂ ಹೊರಗಿಡಲು ಟ್ರಿಪ್ಸ್ ಒಪ್ಪಂದಕ್ಕೆ ಅಧಿಕಾರ ಇದೆಯೇ ಎನ್ನುವುದು.

9. ಭಾರತ ಇದುವರೆಗೆ 686 ಪೇಟೆಂಟ್ ಅರ್ಜಿಗಳನ್ನು ಸಲ್ಲಿಸುವುದರೊಂದಿಗೆ ಅಭಿವೃದ್ಧಿಶೀಲ ರಾಷ್ಟ್ರಗಳ ಪೈಕಿ ಮೂರನೇ ಸ್ಥಾನದಲ್ಲಿದೆ. ಕೊರಿಯಾ (7061) ಮತ್ತು ಚೀನಾ (5456) ಅರ್ಜಿಗಳನ್ನು 2007ರಲ್ಲಿ ಸಲ್ಲಿಸಿವೆ. ಈ ಅವಧಿಯಲ್ಲಿ ವಿಪೋಗೆ ಅತಿಹೆಚ್ಚು ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗಿದ್ದವು.

10. ಕೈಗಾರಿಕಾ ನೀತಿ ಮತ್ತು ಉತ್ತೇಜನಾ ವಿಭಾಗದ ಉನ್ನತ ಮಟ್ಟದ ಸಮಿತಿ ಕಾರ್ಯದರ್ಶಿ ನೇತೃತ್ವದಲ್ಲಿ, ಜಿನೀವಾದಲ್ಲಿ 2010ರ ಸೆಪ್ಟೆಂಬರ್ 22ರಿಂದ 29ರವರೆಗೆ ನಡೆದ ವಿಪೋ ಸದಸ್ಯರಾಷ್ಟ್ರಗಳ ಸಭೆಯಲ್ಲಿ ಭಾಗಹವಿಸಿತ್ತು.

## 32. ಜಾಗತಿಕ ಸುಸ್ಥಿರ ಅಭಿವೃದ್ಧಿಗಾಗಿ – ಅಜೆಂಡಾ 2030ಯ ಪ್ರಾಮುಖ್ಯತೆ

"ನನ್ನೊಬ್ಬನ ಸುಃಖ – ನನ್ನ ಸ್ವಾರ್ಥಕ್ಕಾಗಿ, ನನ್ನೊಬ್ಬನ ತ್ಯಾಗ ವಿಶ್ವದ ಉಳಿವಿಗಾಗಿ" ಎಂಬ ನಾಣ್ಣುಡಿಯಂತೆ ಇಡೀ ವಿಶ್ವವೇ ಇಂದು ನಮ್ಮ ಭವಿಷ್ಯದ ಕಡೆ ಚಿಂತಿಸುವ ಸಕಾಲ ಬಂದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ವಿಶ್ವಸಂಸ್ಥೆಯ 70ನೇ ಅಧಿವೇಶನದಲ್ಲಿ, "ಸುಸ್ಥಿರ ಅಭಿವೃದ್ಧಿಗಾಗಿ – ಅಜೆಂಡಾ 2030" ಎಂಬ ಅಜೆಂಡಾ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತ್ತು.


www.shikarat.com

ಸುಸ್ಥಿರ ಅಭಿವೃದ್ಧಿ ಎಂದರೆ "ಸಂಪನ್ಮೂಲಗಳನ್ನು ಅವುಗಳ ಪುನರ್ ಬಳಕೆಯ ದೃಷ್ಟಿಯಿಂದ ಪರಿಸರ ಮಾಲಿನ್ಯಗೊಳ್ಳದಂತೆ ಬಳಸುವುದೇ ಸುಸ್ಥಿರ ಅಭಿವೃದ್ಧಿಯಾಗಿದೆ". ಪ್ರಸ್ತುತದಲ್ಲಿ ಸುಸ್ಥಿರ ಅಭಿವೃದ್ಧಿಯು, "ಪರಿಸರ ಮತ್ತು ಆರ್ಥಿಕ ಅಭಿವೃದ್ಧಿಯ" ಪರಿಭಾವನೆಗಳು ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ಪರಿಭಾವನೆಯನ್ನು 1987ರಲ್ಲಿ ವಿಶ್ವಸಂಸ್ಥೆಯ "ಪ್ರಪಂಚ ಪರಿಸರ ಆಯೋಗದ" ಅಧ್ಯಕ್ಷರಾಗಿದ್ದ "ಬ್ರಂಟ್‌ಲ್ಯಾಂಡ್"ರವರು ಬಳಸಿದರು. ಅವರ ವರದಿಯಾದ "ನಮ್ಮ ಸಾಮಾನ್ಯ ಭವಿಷ್ಯ" ಅಲ್ಲಿ ಈ ರೀತಿ ವ್ಯಾಖ್ಯಾನಿಸಿದ್ದಾರೆ, "ಇಂದಿನ ಮಾನವನ ಅಗತ್ಯಗಳನ್ನು, ಮುಂದಿನ ಜನಾಂಗದ ಕಲ್ಯಾಣವನ್ನು ಹಾಳು ಮಾಡದೆ ಪೂರೈಸುವುದನ್ನೇ ಸುಸ್ಥಿರ ಅಭಿವೃದ್ಧಿ ಎಂದಿದ್ದಾರೆ.

ಸುಸ್ಥಿರ ಅಭಿವೃದ್ಧಿಯು ಕೆಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ. 21ನೇ ಶತಮಾನದಲ್ಲಿ ಜನಸಂಖ್ಯೆ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು ಅವರ ಅಗತ್ಯಗಳೂ ಸಹ ಅಷ್ಟೇ ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ, ಅಗತ್ಯಗಳ ಪೂರೈಕೆಗೆ ಬೇಕಾದ ಸಂಪನ್ಮೂಲಗಳು ಮಿತವಾಗಿರುವುದರಿಂದ, ಯೋಜಿತವಾದ ಬಳಕೆ ಅತ್ಯಂತ ಅಗತ್ಯವಾಗಿದೆ. ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಪರಿಸರವನ್ನು ಹಾಳು ಮಾಡದೇ ಮುಂದಿನ ಜನಾಂಗದ ಹಿತಕಾಯುವುದು ಅಗತ್ಯವಾಗಿದೆ.

ಏನಿದು ಅಜೆಂಡಾ 2030 ?

ವಿಶ್ವ ಸಂಸ್ಥೆಯು, ತನ್ನ 70ನೇ ಸಾಮಾನ್ಯ ಅಧಿವೇಶದಲ್ಲಿ 17 ಜಾಗತಿಕ ಗುರಿಗಳನ್ನು ಸುಸ್ಥಿರ ಅಭಿವೃದ್ಧಿಗಾಗಿ ನಿಗಧಿಪಡಿಸಿ ಸರ್ವಾನುಮತದಿಂದ ಅನುಬೋದನೆ ಪಡೆದುಕೊಂಡಿತು.

- ಭೂಮಿ, ಸಂಪತ್ತು ಮತ್ತು ಜನರು – ಈ ಮೂರರ ಅಭಿವೃದ್ಧಿಗಾಗಿ ರೂಪಿಸಲಾದ ಒಂದು ಸಮಗ್ರ ಕ್ರಿಯಾ ಯೋಜನೆಯಾಗಿದೆ.
- ಜಗತ್ತಿನ ಎಲ್ಲಾ ದೇಶಗಳೂ ಹಾಗೂ ಅವುಗಳ ನೀತಿಗಳು ಇದರ ವ್ಯಾಪ್ತಿಗೆ ಒಳಪಡಲಿವೆ.
- ಅಜೆಂಡಾ 2030 ಇನ್ನು ಮುಂದೆ 2000ನೇ ಇಸ್ವಿಯಲ್ಲಿ ವಿಶ್ವಸಂಸ್ಥೆ ಅಳವಡಿಸಿಕೊಂಡಿದ್ದ "ಸಹಸ್ರ ಮಾನದ ಅಭಿವೃದ್ಧಿ ಗುರಿಗಳ (ಎಂಡಿಜಿ) ಸ್ಥಾನವನ್ನು ತುಂಬಲಿವೆ.
- ವಿಶ್ವಾದ್ಯಂತ ಎಲ್ಲಾ ರೀತಿಯ ಬಡತನ ನಿರ್ಮೂಲನೆ, ಹಸಿವು ನಿವಾರಣೆ, ಸುಸ್ಥಿರ ಕೃಷಿಗೆ ಪ್ರೋತ್ಸಾಹ, ಮಾನವೀಯ ಹಕ್ಕುಗಳ ಸಂರಕ್ಷಣೆ, ಜಾಗತಿಕ ಶಾಂತಿ, ಲಿಂಗತಾರತಮ್ಯ ನಿವಾರಣೆ ಹೀಗೆ ಹತ್ತು ಹಲವು ದೃಷ್ಟಿಕೋನಗಳನ್ನು ಹೊಂದಿವೆ.
- 2030ನೇ ಇಸ್ವಿಯೊಳಗೆ ಎಲ್ಲಾ ಸದಸ್ಯರಾಷ್ಟ್ರಗಳು ಗುರಿ ತಲುಪಲು ಪ್ರತಿವರ್ಷಕ್ಕೆ 2.31 ಲಕ್ಷ ಕೋಟಿಯಿಂದ 3.30 ಲಕ್ಷ ಕೋಟಿ ಖರ್ಚು ಮಾಡಲಾಗುತ್ತದೆ.

**ಅಜೆಂಡಾ ಒಳಗೊಂಡಿರುವ 17 ಗುರಿಗಳು – (ಖಆಉ)**

1) ವಿಶ್ವದಲ್ಲಿರುವ ಎಲ್ಲಾ ರೀತಿಯ ಬಡತನವನ್ನು ನಿರ್ಮೂಲನೆ ಮಾಡುವುದು.

2) ಆಹಾರ ಭದ್ರತೆಯ ಮೂಲಕ ಹಸಿವನ್ನು ನಿರ್ಮೂಲನೆ ಮಾಡುವುದು.

3) ಎಲ್ಲರಿಗೂ ಸಮಾನ ಮತ್ತು ಗುಣಮಟ್ಟದ ಶಿಕ್ಷಣ ಒದಗಿಸಿ ಕಲಿಕೆಗೆ ಅವಕಾಶ.

4) ಲಿಂಗ ಸಮಾನತೆ ಸಾಧಿಸುವುದು.

5) ಆಂತರಿಕ ಮತ್ತು ಅಂತರಾಷ್ಟ್ರೀಯ ಅಸಮಾನತೆ ಹೋಗಲಾಡಿಸುವುದು.

6) ಎಲ್ಲಾ ವಯೋಮಾನದವರಿಗೂ ಆರೋಗ್ಯ ಆರೋಗ್ಯಯುತ ಜೀವನದ ಭರವಸೆ ನೀಡುವುದು.

7) ನೈರ್ಮಲ್ಯ ಮತ್ತು ನೀರಿನ ಸುಸ್ಥಿರ ನಿರ್ವಹಣೆ

8) ಸುಸ್ಥಿರ ಅಭಿವೃದ್ಧಿ ಸಾಧಿಸಿ, ಉತ್ಪಾದನಾ ಮತ್ತು ಉದ್ಯೋಗಾವಕಾಶಗಳ ಸೃಷ್ಠಿ. ಎಲ್ಲರಿಗೂ ಗೌರವಯುತ ಉದ್ಯೋಗ.

9) ಉತ್ತಮ ಮೂಲಭೂತ ಸೌಕರ್ಯ ಹಾಗೂ ಸುಸ್ಥಿರ ಕೈಗಾರಿಕೀಕರಣ ಮತ್ತು ಸೃಜನಾತ್ಮಕತೆ.

10) ನಗರ ಮತ್ತು ಇತರೆ ವಸತಿ ಪ್ರದೇಶಗಳನ್ನು ಸುಸ್ಥಿರ ಪ್ರದೇಶಗಳಾಗಿ ಪರಿವರ್ತನೆ.

11) ಸುಸ್ಥಿರ ಬಳಕೆ ಹಾಗೂ ಉತ್ಪಾದನಾ ಪದ್ಧತಿಯನ್ನು ಖಾತರಿಪಡಿಸಬೇಕು.

12) ಹವಾಮಾನ ಬದಲಾವಣೆ ಹಾಗೂ ಅದರ ಪರಿಣಾಮಗಳ ವಿರುದ್ಧ ಹೋರಾಡಲು ಸೂಕ್ತ ಕ್ರಮ.

13) ಸಾಗರ ಮತ್ತು ಸಾಗರ ಸಂಪಮ್ಮೂಲಗಳನ್ನು ಸುಸ್ಥಿರ ಅಭಿವೃದ್ಧಿಗಾಗಿ ಸಮರ್ಪಕ ಬಳಕೆ ಮತ್ತು ಸಂರಕ್ಷಣೆ.


www.shikarat.com

14) ಪರಿಸರ ಮತ್ತು ಪರಿಸರ ವ್ಯವಸ್ಥೆಯ ಪುನಶ್ಚೇತನ, ಸಂರಕ್ಷಣೆ ಮಾಡುವುದು.

15) ಸುಸ್ಥಿರ ಅಭಿವೃದ್ಧಿಗಾಗಿ, ಶಾಂತಿಯುತ ಸಮಾಜದ ನಿರ್ಮಾಣ ಎಲ್ಲರಿಗೂ ಹಕ್ಕುದಾರಿಕೆ ಮತ್ತು ಅಭಿವೃದ್ಧಿ ಪಾಲ್ಗೊಳ್ಳುವಂತೆ ಮಾಡುವುದು.

16) ಎಲ್ಲರಿಗೂ ಸಮರ್ಥ ಆಧುನಿಕ ಶಕ್ತಿ ಮೂಲಗಳನ್ನು ಖಚಿತಗೊಳಿಸುವುದು.

17) ಸುಸ್ಥಿರ ಅಭಿವೃದ್ಧಿಗಾಗಿ ಗುರುತಿಸಿರುವ ಮಾರ್ಗಗಳನ್ನು ಬಲಪಡಿಸಲು ಜಾಗತಿಕ ಪಾಲುದಾರಿಕೆಗೆ ಅವಕಾಶ.

ಕಡಿಮೆ ಸಂಪನ್ಮೂಲಗಣನ್ನು ಬಳಸಿಕೊಂಡು ಈ ಗುರಿಗಳನ್ನು ಸಾಧನೆ ಮಾಡಬೇಕಾದರೆ, ದೇಶದ ಪ್ರತಿಯೊಬ್ಬ ನಾಗರೀಕರನ ಪಾತ್ರವು ಅತ್ಯಂತ ಗಮನಾರ್ಹವಾದದ್ದು. ಇದೊಂದು ಸಮರ್ಥ ಅನುಷ್ಠಾನದ ವಿಶಿಷ್ಠ ಚಿಂತನೆಯ ದೃಷ್ಠಿಕೋನ. ಜನರ ವಿವೇಕಯುತ ಸಹಭಾಗಿತ್ವದಿಂದ ಮಾತ್ರ ಸುಸ್ಥಿರ ಅಭಿವೃದ್ಧಿ ಸಾಧ್ಯ. ಸರ್ಕಾರದ ನೀತಿಗಳು ಬಹಳ ಮುಖ್ಯವಾಗಿದೆ. ಇಂಧನ ಮೂಲಗಳ ಬಳಕೆಯಿಂದ ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಈ ಎಲ್ಲಾ ಗುರಿಗಳೂ ಸಹ ನಮ್ಮೆಲ್ಲರ ಭವಿಷ್ಯದ ನೆಮ್ಮದಿಯೂ ಅಡಗಿದೆ.

## 33. ತ್ಯಾಜ್ಯ ನಿರ್ವಹಣೆ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಚರ್ಚಿಸಿ.

ನಮ್ಮ ಸೌರವ್ಯೂಹದಲ್ಲಿ ಜೀವಸೆಲೆ ಹೊಂದಿರುವ ಏಕೈಕ ಗ್ರಹ ಭೂಮಿ. ಭೂಮಿಯನ್ನು ಈ 21ನೇ ಶತಮಾನದಲ್ಲಿ ಕಾಡುತ್ತಿರುವ ಸಮಸ್ಯೆಗಳಲ್ಲಿ ಇದು ಒಂದು ಪ್ರಮುಖವಾದದ್ದು. ಮನುಷ್ಯನ ಅಭಿವೃದ್ಧಿ ಎಂಬ ಸ್ವಾರ್ಥ ಭಾವನೆಯಿಂದ ತ್ಯಾಜ್ಯ ಅಥವಾ ಘನತ್ಯಾಜ್ಯದ ಸಮಸ್ಯೆ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ.

ಅಂದರೆ 'ನಗರ ಪ್ರದೇಶಗಳ ಜನರು ಬಳಸಿ ಎಸೆಯುವ ನಿರುಪಯೋಗಿ ಜೈವಿಕ, ಅಜೈವಿಕ, ರಾಸಾಯನಿಕ ವಸ್ತುಗಳು ತ್ಯಾಜ್ಯವಸ್ತುಗಳೆನಿಸಿಕೊಳ್ಳುತ್ತವೆ. ಉದಾಹರಣೆಗೆ ಪ್ಲಾಸ್ಟಿಕ್‌ಡಬ್ಬ, ಬಾಟಲಿಗಳು, ಪೇಪರ್ ಸಾಮಾಗ್ರಿಗಳು, ಪ್ಲಾಸ್ಟಿಕ್ ಬ್ಯಾಗ್‌ಗಳು, ಆಹಾರದ ಪೊಟ್ಟಣಗಳು, ತರಕಾರಿಸಿಪ್ಪೆ, ಇತರೆ ಅಡುಗೆಮನೆ ಕಸ, ಇ–ತ್ಯಾಜ್ಯ (ಹಳೆಯ ಟಿವಿ, ರೇಡಿಯೋ, ಕಂಪ್ಯೂಟರ್ ಇತ್ಯಾದಿ). ಕೈಗಾರಿಕೆಗಳಿಂದ ಬರುವ ತ್ಯಾಜ್ಯಗಳು ಇತ್ಯಾದೆ. ಇಂತಹ ತ್ಯಾಜ್ಯದ ಸಮಸ್ಯೆಯನ್ನು ಪ್ರಪಂಚದ ಮುಂದುವರೆದ ದೇಶಗಳಲ್ಲಿನ ನಗರಗಳಲ್ಲಿ ಸರ್ವೆ ಸಾಮಾನ್ಯವಾಗಿ ಕಾಣಬಹುದು. ಉದಾಹರಣೆಗೆ ಬರ್ಲಿನ್, ಪ್ಯಾರೀಸ್, ಲಕ್ಸಂಬರ್ಗ್ ೯, ಭಾರತದ ದೆಹಲಿ, ಮುಂಬೈ, ಬೆಂಗಳೂರು, ಹೈದರಾಬಾದ್, ಇತ್ಯಾದೆ ನಗರಗಳಲ್ಲಿ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ.

ಸಾಮಾನ್ಯವಾಗಿ ಸಾರ್ವಜನಿಕಿ ಸ್ಥಳಗಳಲ್ಲಿ ಅಥವಾ ರಸ್ತೆಗಳಲ್ಲಿ ಎಸೆಯುವುದು ಅಥವಾ ಮನೆಯಾಚೆಗಿನ ಖಾಲಿ ಸ್ಥಳಗಳಲ್ಲಿ ತುಂಬಿಸುವುದು ಹೆಚ್ಚಿನವರು ಅನುಸರಿಸುವ ತ್ಯಾಜ್ಯ ನಿರ್ವಹಣಾ ವಿಧಾನ. ಈ ರೀತಿ ಬೇಜಾವಾಬ್ದಾರಿತನದಿಂದ ಸಿಕ್ಕಸಿಕ್ಕಲ್ಲಿ ಕಸಗಳನ್ನು ಎಸೆಯುವುದರಿಂದ ಸಾಕಷ್ಟು ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ಸಮಸ್ಯೆಗಳು ಉದ್ಭವವಾಗುತ್ತವೆ. ಈ ಸಮಸ್ಯೆ ನಗರಾಡಳಿತ ಸಂಸ್ಥೆಗಳಿಗೆ ದೊಡ್ಡ ಸಮಸ್ಯೆ ಮತ್ತು ಸವಾಲಾಗಿ ಬೆಳೆಯುತ್ತಿದೆ. ಅದಕ್ಕಾಗಿ 'ನಗರ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ, ವಿಂಗಡಿಸಿ ಸಾಧ್ಯವಾದವುಗಳನ್ನು ಮರುಬಳಕೆ ಮಾಡುವ ಮತ್ತು ಪ್ರಯೋಜನರಹಿತ ವಸ್ತುಗಳನ್ನು ಪರಿಸರಕ್ಕೆ ಸಮಸ್ಯೆಯಾಗದಂತೆ ನಿಭಾಯಿಸುವ ಸಮಗ್ರಯೋಜನೆಯನ್ನು 'ತ್ಯಾಜ್ಯ ನಿರ್ವಹಣೆ' (Waste Management) ವ್ಯವಸ್ಥೆ ಎನ್ನಬಹುದು.

ನಗರ ಪ್ರದೇಶಗಳ ತ್ಯಾಜ್ಯ ಅಥವಾ ಘನ ತ್ಯಾಜ್ಯ ಉತ್ಪಾದನೆಯ ಮೂಲಗಳೆಂದರೆ

ಎ. ವಸತಿ ಮೂಲಗಳಿಂದ : ಮನೆಗಳಿಂದ ಹೊರಹಾಕುವ ಆಹಾರವಸ್ತು, ತರಕಾರಿ ಸಿಪ್ಪೆ, ಪ್ಲಾಸ್ಟಿಕ್, ಬಟ್ಟೆಬರೆ ಇತ್ಯಾದಿ

ಬಿ. ವಾಣಿಜ್ಯಕ ಮೂಲಗಳಿಂದ: ಅಂಗಡಿಗಳು, ಹೋಟೆಲ್, ಮಾರುಕಟ್ಟೆ, ಗ್ಯಾರೇಜ್, ಆಸ್ಪತ್ರೆ ಇತ್ಯಾದೆ ಮೂಲಗಳ ತ್ಯಾಜ್ಯವಸ್ತುಗಳು.

ಸಿ. ಸಾಂಸ್ಥಿಕ ಮೂಲಗಳಿಂದ: ಶಾಲಾ–ಕಾಲೇಜುಗಳಿಂದ, ಕಛೇರಿಗಳಿಂದ, ಸಂಘ ಸಂಸ್ಥೆಗಳಿಂದ, ಸಾರ್ವಜನಿಕ ಸಭೆ–ಸಮಾರಂಭಗಳಿಂದ ಹೊರಹಾಕುವ ಅನುಪಯುಕ್ತ ವಸ್ತುಗಳು.

ಡಿ. ಮುನ್ಸಿಪಲ್ ಮೂಲ ಅಥವಾ ನಗರಾಡಳಿತ ಮೂಲಗಳಿಂದ: ಆಡಳಿತ ಸಂಸ್ಥೆಗಳು, ಕಟ್ಟಡಗಳನ್ನು ನಿರ್ಮಾಣ ಮಾಡುವ, ನಿರ್ನಾಮು ಮಾಡುವ, ರಸ್ತೆಗಳ ಅಭಿವೃದ್ಧಿ ಮೆಟ್ರೋ ರೈಲು ಮಾರ್ಗಗಳ ರಚನೆ ಇತ್ಯಾದಿ ಕ್ರಮಗಳಿಂದ ಉತ್ಪತ್ತಿಯಾಗುತ್ತವೆ.

ಇ. ಕೈಗಾರಿಕ ಮೂಲಗಳಿಂದ: ನಗರ ಮತ್ತು ಪಟ್ಟಣಗಳಲ್ಲಿ ಕೈಗಾರಿಕೆಗಲು ಹೊರಹಾಕುವ ನಿರುಪಯುಕ್ತ ವಸ್ತುಗಳೂ ಉದಾಹರಣೆಗೆ ರಬ್ಬರ್, ಲೋಹ ರಾಸಾಯನಿಕ ಇತ್ಯಾದಿ ವಸ್ತುಗಳು.

ಈ ಎಲ್ಲಾ ಮೂಲಗಳಿಂದ ಉತ್ಪಾದನೆಯಾಗುವ ತ್ಯಾಜ್ಯವಸ್ತುಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುವ ಕ್ರಮದ ಅಗತ್ಯತೆ ಇಂದು ಬಹಳ ಪ್ರಾಮುಖ್ಯತೆ ಪಡೆದಿಕೊಳ್ಳುತ್ತಿದೆ. ತ್ಯಾಜ್ಯ ನಿರ್ವಹಣೆ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಈ ಕೆಳಗಿನ ರೇಖಾಚಿತ್ರದ ಮೂಲಕ ವಿವರಿಸಲಾಗಿದೆ.

Source reduction
ತ್ಯಾಜ್ಯ ಮೂಲಗಳ ನಿಯಂತ್ರಣ

Recycling priority
ಮರುಬಳಕೆಗೆ ಆದ್ಯತೆ

Universal Coaching Centre


www.shikarat.com




**ನಿಯಂತ್ರಣ:** ಮೂಲಹಂತದಲ್ಲಿಯೇ ಹಸ್ತಕ್ಷೇಪಗಳ ತ್ಯಾಜ್ಯಗಳನ್ನು ವರ್ಗೀಕರಣ ಕಾರ್ಯವನ್ನು ಸಹ ಮಾಡಬೇಕಾಗುತ್ತದೆ. ಅವುಗಳೆಂದರೆ:

**1. ಜೈವಿಕ ವಿಘಟನೀಯ ತ್ಯಾಜ್ಯಗಳು:** ಸೂಕ್ಷ್ಮಜೀವಿಗಳಿಂದ ವಿಘಟಿಸಲ್ಪಡಿಸುವ ತ್ಯಾಜ್ಯಗಳೆ ಜೈವಿಕ ತ್ಯಾಜ್ಯಗಳು. ಉದಾಹರಣಗೆ ಹಣ್ಣು, ತರಕಾರಿ, ಸಿಪ್ಪೆ, ತೊಗಟೆ ತಿರಸ್ಕರಿಸಿದ ಆಹಾರ, ಟೀ ಸೊಪ್ಪು. ಕೃಷಿ ತ್ಯಾಜ್ಯಗಳು ಇತ್ಯಾದಿ.

**2. ವಿಘಟನೀಯವಲ್ಲದ ತ್ಯಾಜ್ಯಗಳು :** ಸೂಕ್ಷ್ಮಜೀವಿಗಳಿಂದ ವಿಘಟಿಸಲಡದ ತ್ಯಾಜ್ಯಗಳೆ ವಿಘಟನೀಯವಲ್ಲದ ತ್ಯಾಜ್ಯಗಳು. ಉದಾಹರಣೆಗೆ ಪಾಲಿಥೀನ್ ಚೀಲಗಳು, ಲೋಹಚೂರುಗಳು, ಗಾಜಿನ ಉತ್ಪನ್ನಗಳು, ಸೆರಾಮಿಕ್ ಉತ್ಪನ್ನಗಳು, ಆಸ್ಬೆಸ್ಟಸ್ ವಸ್ತುಗಳು ಇತ್ಯಾದಿ.

**3. ವಿಷಯುಕ್ತ ತ್ಯಾಜ್ಯಗಳು:** ವಿಷದಿಂದ ಕೂಡಿದ ಉತ್ಪನ್ನಗಳಾದ ರೋಗ ನಿರೋಧಕ ಔಷಧಗಳು, ಅಲ್ಕಲೈನ್ಸ್, ವಿಕಿರಣಗಳು, ಕೈಗಾರಿಕಾ ತ್ಯಾಜ್ಯಗಳು ಇತ್ಯಾದಿ.

**4. ಜೀವ ವೈದ್ಯಕೀಯ ತ್ಯಾಜ್ಯಗಳು:** ಆಸ್ಪತ್ರೆಗಳಲ್ಲಿ ಉತ್ಪಾದನೆಯಾಗುವ ವಂಜ್ಯೀಕರಿಸಿದ ಹತ್ತಿ, ಸಿರೆಂಜ್ ಗಳು, ಕತ್ತರಿಗಳು, ಶಸ್ತ್ರಚಿಕಿತ್ಸೆಯಿಂದ ತೆಗೆದ ಶರೀರದ ಭಾಗಗಳು, ಇತ್ಯಾದಿಗಳು. ಈ ರೀತಿಯಲ್ಲಿ ವರ್ಗೀಕರಣ ಮಾಡಿ ಸಂಗ್ರಹಿಸಿದರೆ ಮುಂದಿ ತ್ಯಾಜ್ಯನಿರ್ವಹಣ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ.

**ಬಿ. ಮರುಬಳಕೆಗೆ ಆದ್ಯತಾ ಕ್ರಮ:** ತ್ಯಾಜ್ಯವಸ್ತುಗಳನ್ನು ಅವುಗಳ ಉತ್ಪಾದನಾ ಮೂಲಗಳಲ್ಲೇ ವಿಂಗಡಿಸಿ ಅದರಲ್ಲಿನ ಕೆಲವು ವಸ್ತುಗಳ ಮರುಬಳಕೆ ಮಾಡಿಕೊಳ್ಳಲು ಆದ್ಯತೆ ನೀಡುವುದು. ಉದಾಹರಣೆಗೆ ಪ್ಲಾಸ್ಟಿಕ್, ಪೇಪರ್, ಲೋಹಗಳು, ಗಾಜಿನ ಬಾಡಲಿಗಳು ಇತ್ಯದಿ. ಇವರಿಂದ ನೂರಾರು ಜನರಿಗೆ ಉದ್ಯೋಗ ದೊರದಿದಂತಾಗುತ್ತದೆ ಅಲ್ಲದೆ ಅತಿಯಾದ ಘನತ್ಯಾಜ್ಯ ಸಂಗ್ರಹಣೆ ಕೂಡ ನಿಯಂತ್ರಣಕ್ಕೆ ಬರುತ್ತದೆ. ಇದರಿಂದ ಭೂಮಾಲಿನ್ಯ ಆಗುವುದನ್ನು ತಡೆಯಲು ಸಾಧ್ಯ. ಹೇಗೆಂದರೆ ಚರ್ಮದ ಚಪ್ಪಲಿ ಮಣ್ಣಿನಲ್ಲಿ 100ವೈ ಇರಬಲ್ಲದು ಕೊಳೆಯದಂತೆ ಪ್ಲಾಸ್ಟಿಕ್ ಮತ್ತು ಗಾಜುಗಳು ಮಣ್ಣಿನಲ್ಲಿ 150 ರಿಂದ 200 ವೈ ಇರಬಲ್ಲದು ಕೊಳೆಯದಂತೆ. ಮರುಬಳಕೆಯಿಂದ ತ್ಯಾಜ್ಯವಸ್ತುಗಳು ಕೊರತೆ ಕೂಡಾ ತಗ್ಗಿಸಲು ಸಾಧ್ಯವಾಗುತ್ತದೆ.

**ಸಿ. ಸೂಕ್ತ ವಿಲೇವಾರಿ ಕ್ರಮ**

ತ್ಯಾಜ್ಯನಿರ್ವಹಣೆಯ ಅತ್ಯಂತ ಪ್ರಧಾನವಾದ ಪ್ರಕ್ರಿಯೆಯಾಗಿದೆ ಈ ಕ್ರಿಯೆಯನ್ನು ಬೇರೆಬೇರೆ ವಿಧಾನಗಳನ್ನು ಅನುಸರಿಸಿ ಮಾಡಬಹುದು.

1. **ದಹನ ಕ್ರಿಯೆ:** ಕೆಲವು ಸೋಂಕು ತ್ಯಾಜ್ಯಗಳು ಪ್ಲಾಸ್ಟಿಕ್ ಉತ್ಪನ್ನಗಳು, ಪೇಪರ್ ಗಳನ್ನು ಈ ಕ್ರಿಯೆಯ ಮೂಲಕ ದಹಿಸಿ ತ್ಯಾಜ್ಯದ ಪ್ರಮಾಣಗಳನ್ನು ತಗ್ಗಿಸಬಹುದು.
2. **ಕೊಳೆಯಿಸುವುದು ಮತ್ತು ಎರೆಹುಳು ಬೇಸಾಯ:** ತ್ಯಾಜ್ಯಗಳನ್ನು ಮೂಲಗಳಿಂದ ಸಂಗ್ರಹಿಸಿದ ನಂತರ ವರ್ಗೀಕರಿಸಿದ ಮೇಲೆ ಹಸಿ ಕಸವನ್ನು ನೈಸರ್ಗಿಕ ಗೊಬ್ಬರಗಳ ಉತ್ಪಾದನೆಗೆ ಬಳಸಿಕೊಳ್ಳಬಹುದು. ಅಲ್ಲದೆ ಗೊಬರ್ ಗ್ಯಾಸ್ ಉತ್ಪಾದನೆಯಲ್ಲಿ ಬಳಸಬಹುದು.
3. **ತ್ಯಾಜ್ಯ ಹೊಂಡಗಳಲ್ಲಿ ಮುಚ್ಚುವುದು:** ಪುನರ್ ಬಳಕೆಗೆ ಯೋಗ್ಯವಲ್ಲದ ವಸ್ತುಗಳನ್ನು ಯಾವುದೇ ಪರಿಸರ ಸಮಸ್ಯೆಗಳಿಗೆ ಆಸ್ಪದವಿಲ್ಲದಂತೆ ವೈಜ್ಞಾನಿಕ ವಿಧಾನಗಳ ಮೂಲಕ ನಿರ್ಮಿಸಲಾದ ಆಳವಾದ ತ್ಯಾಜ್ಯಹೊಂಡಗಳಲ್ಲಿ ತುಂಬಿಸಿ ಮಣ್ಣನ್ನು ಮುಚ್ಚಬೇಕು. ಹೊಂಡಗಳು ನೇರವಾಗಿ ಅಂತರ್ ಜಲ ಕುಡಿಯುವ ನೀರಿನ ಮೂಲಗಳಿಂದ ದೂರವಿರಿಸಬೇಕು ಮತ್ತು ಹೊಂಡಗಳ ತಳಭಾಗ ಸೀಮೆಂಟ್ ನಿಂದ ನಿರ್ಮಿಸಿದ ವೈಜ್ಞಾನಿಕ ಹೊಂಡಗಳಾಗಿರಬೇಕು. ಇಲ್ಲವಾದರೆ ಈ ಬೆಂಗಳೂರಿನ ಬಿಂಗಿಪುರ, ಮಂಡೂರಿನಲ್ಲಿ ಸೃಷ್ಟಿಯಾಗಿರುವ ಸಮಸ್ಯೆಗಳು ಉಗಮವಾಗುತ್ತಲೇ ಇರುತ್ತವೆ.
4. **ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಸಾಧ್ಯ:** ಕಸದಿಂದ ರಸ ಎಂಬಂತೆ ನಗರಗಳ ತ್ಯಾಜ್ಯದ ನಿರ್ವಹಣೆಗೆ ಈ ಆಧುನಿಕ ವಿಧಾನ ಅತ್ಯಂತ ಯೋಗ್ಯವಾದದ್ದು. ಈ ವಿಧಾನವನ್ನು ಯೂರೋಪಿನ ರಾಷ್ಟ್ರಗಳಾದ ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಫ್ರಾನ್ಸ್, ದೇಶಗಳಲ್ಲಿ ರೂಢಿಯಲ್ಲಿದೆ. ಈ ವಿಧಾನ ಅಳವಡಿಸಿಕೊಂಡರೆ ಅಲ್ಪಪ್ರಮಾಣದಲ್ಲಿ ಶಕ್ತಿಯ ಕೊರತೆಯನ್ನು ನೀಗಿಸಬಹುದು. ಅಲ್ಲದೆ ಕಸದ ಸಮಸ್ಯೆಯನ್ನು ಸೂಕ್ತರೀತಿಯಲ್ಲಿ ನಿರ್ವಹಣೆ ಮಾಡಿದಂತಾಗುತ್ತದೆ.
5. **ಸರ್ಕಾರದ ನೀತಿಗಳು ಮತ್ತು ಸಾರ್ವಜನಿಕ ಜಾಗೃತಿ:** ತ್ಯಾಜ್ಯ ನಿರ್ವಹಣೆ ಆಧುನಿಕ ಸರಕಾರಗಳ ಒಂದು ಮೂಲಭೂತ ಕ್ರಿಯೆಯಾಗಿದೆ. ನಮ್ಮ ನಗರಗಳಲ್ಲಿನಲ ಅಶುಚಿಯಾದ ವಾತಾವರಣವು ದುಃಖದ ಪ್ರತಿಬಿಂಬವನ್ನು ಮೂಡಿಸುವಂತಿದ್ದು, ಮೂಲಭೂತ ಸೇವೆಯನ್ನು ಒದಗಿಸಲು ನಗರ ಸ್ಥಳೀಯ ಸಂಸ್ಥೆಗಲ ಅಸಮರ್ಥತೆಯನ್ನು ತೋರುತ್ತದೆ, ಈ ವಿಷಯಕ್ಕೆ ಸಂಬಂದಿಸಿದಂತೆ ಭಾರತದ್ಲಿ ಸುಪ್ರೀಂಕೋರ್ಟ್ ಭಾರತ ಸರ್ಕಾರಕ್ಕೆ ನಿರ್ದೇಶನ ನೀಡಿದ್ದು, ಅದರಂತೆ ಭಾರತ ಸರ್ಕಾರ 'ಘನ ತ್ಯಾಜ್ಯ ವಸ್ತು

Universal Coaching Centre


www.shikarat.com

ನಿರ್ವಹಣೆ ನಿಯಮ–2000' ವನ್ನು ಜಾರಿಗೊಳಿಸಿದ್ದು, ಅದರಂತೆ ಎಲ್ಲಾ ರಾಜ್ಯ ಸರ್ಕಾರಗಳು ಸೂಕ್ತ ರೀತಿಯ ಕ್ರಮಗಳನ್ನು ಜರುಗಿಸಬೇಕಾಗಿದೆ. ರಾಜ್ಯ ಸರ್ಕಾರಗಳು ಜನರಲ್ಲಿ ಜಾಗೃತಿ ಮೂಡಿಸಿ ಹೊಸನೀತಿಗಳನ್ನು ರೂಪಿಸುವುದು ಅಗತ್ಯ.

**ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳು**

- ನಗರ ಸ್ಥಳೀಯ ಸಂಸ್ಥೆಗಳ ತ್ಯಾಜ್ಯ ನಿರ್ವಹಣಾ ಸಾಮಾರ್ಥ್ಯವನ್ನು ಹೆಚ್ಚಿಸಬೇಕು.
- ನಗರ ಪಟ್ಟಣ ಪ್ರದೇಶಗಳಲ್ಲಿ ಆಧುನಿಕ ಕಸಾಹಿಖಾನೆಗಳನ್ನು ಸ್ಥಾಪಿಸಬೇಕು.
- ನಗರ ತ್ಯಾಜ್ಯಗಳ ನಿರ್ವಹಣೆಗೆ ರಾಜ್ಯಮಟ್ಟದಲ್ಲಿ ಉನ್ನತಾಧಿಕಾರಿಗಳ ಸಮಿತಿರಚನೆ ಮಾಡಬೇಕು.
- ನಗರ ಪಟ್ಟಣಗಳ ಪ್ರತಿ ವಾರ್ಡ್ ಮಟ್ಟದಲ್ಲಿ ಸಂಸ್ಕರಣ ಘಟಕಗಳನ್ನು ಸ್ಥಾಪಿಸಬೇಕು
- ಪ್ರತಿ ವಾರ್ಡ್‌ನ ಕಾರ್ಪೋರೇಟರ್ ನೇತೃತ್ವದಲ್ಲಿ ವಾರಾಂತ್ಯದಲ್ಲಿ ಸಾರ್ವಜನಿಕ ಜಾಗೃತಿ ಕಾರ್ಯಗಳನ್ನು ರೂಪಿಸಬೇಕು.
- ತ್ಯಾಜ್ಯನಿರ್ವಹಣಾ ಕ್ರಮ ಉಲ್ಲಂಘಿಸಿದವರಿಗೆ ದಂಡ ವಿಧಿಸುವ ನೀತಿಗಳನ್ನು ರೂಪಿಸಬೇಕು.
- ವಿಶ್ವಸಂಸ್ಥೆಯ 2007 ರ ನಿರ್ಣಯದಂತೆ ನಗರಗಳ ಸಮಸ್ಯೆಗಳ ನಿವಾರಣೆಗೆ 'Brown Agenda'ವನ್ನು ಜಾರಿಗೊಳಿಸಬೇಕು.

ಹೀಗೆ ಸರ್ಕಾರದ ಜೊತೆಗೆ ಕೆಲವು ಎನ್ ಜಿಓಗಳು ಶೈಕ್ಷಣಿಕ ಸಂಘ ಸಂಸ್ಥೆಗಳು ಪ್ರಜ್ಞಾವಂತ ಜನತೆ ತಮ್ಮ ಪರಿಸರದ ಸ್ವಚ್ಛತೆ ಮತ್ತು ಆರೋಗ್ಯ ಕಾಪಾಡಲು ಶ್ರಮವಹಿಸಿದಾಗ ಮಾತ್ರ ಸೂಕ್ತರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ.

## 34.
## ಕರ್ನಾಟಕ ಸಹಕಾರ ಕ್ಷೇತ್ರ ಒಳಗೊಂಡಂತೆ ಭಾರತ ಸಹಕಾರ ಆಂದೋಲನದ ಪರಾಮರ್ಶೆ

'ಎಲ್ಲರಿಗಾಗಿ ನಾನು ನನಗಾಗಿ ಎಲ್ಲರೂ' ಎಂಬ ಪರಿಕಲ್ಪನೆಯ ಮೇರೆಗೆ ಒಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಎಲ್ಲರೂ ಪರಸ್ಪರ ಒಟ್ಟುಗೂಡುವುದೇ ಸಹಕಾರ. ಆಡು ಮುಟ್ಟದ ಸೊಪ್ಪಿಲ್ಲ ಸಹಕಾರವಿಲ್ಲದ ಕ್ಷೇತ್ರವಿಲ್ಲ ಎಂಬ ಮಾತಿನಂತೆ ಸಹಕಾರ ಕ್ಷೇತ್ರ ಇಂದಿನ ಆಧುನಿಕ ಯುಗದಲ್ಲಿ ಅಕ್ಟೋಪಸ್‌ನಂತೆ ತನ್ನ ಬಾಹುಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಚಾಚಿದೆ.

ಸಹಕಾರ ಸಾಮೂಹಿಕ ಜೀವನದ ಒಂದು ಆದರ್ಶ ಮಾರ್ಗ. ಜನರು ಸ್ವಯಂ ಪ್ರೇರಿತವಾಗಿ ಪಾಲ್ಗೊಂಡು ಪ್ರಾಮಾಣಿಕ ಸಹಭಾಗಿತ್ವದಿಂದ ದುಡಿಯುವುದು ಸಹಕಾರದ ತಿರುಳಾಗಿದೆ. ಸಹಕಾರ ಎಂದರೇನು? ಎಂದು ತಿಳಿಯುವುದಾದರೆ ಜನರು ಪರಸ್ಪರ ತಮ್ಮ ನಿರ್ದಿಷ್ಟ ಗುರಿ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಮಾನತೆಯ ಆಧಾರದ ಮೇಲೆ ಸಂಘಟಿತರಾಗಲು ಪ್ರೇರಿಪಿಸುವ ತತ್ವವೇ ಸಹಕಾರ.

1946ರ ಸಹಕಾರಿ ಯೋಜನಾ ಸಮಿತಿ ಪ್ರಕಾರ ವ್ಯಕ್ತಿಗಳು ಸ್ವಯಂ ಪ್ರೇರಿತವಾಗಿ ತಮ್ಮ ಆರ್ಥಿಕ ಬಯಕೆಗಳನ್ನು ಪೂರೈಸಿಕೊಳ್ಳಲು ಸಂಘಟಿತರಾಗಿ ವ್ಯವಸ್ಥೆಗೊಳ್ಳುವ ಸಾಂಸ್ಥಿಕ ರಚನೆಯ ಸಮೂಹವೇ ಸಹಕಾರ.

1946ರ ಸಹಕಾರಿ ಯೋಜನಾ ಸಮಿತಿ ಪ್ರಕಾರ, ವ್ಯಕ್ತಿಗಳು ಸ್ವಯಂ ಪ್ರೇರಿತವಾಗಿ ತಮ್ಮ ಆರ್ಥಿಕ ಬಯಕೆಗಳನ್ನು ಪೂರೈಸಿಕೊಳ್ಳಲು ಸಂಘಟಿತರಾಗಿ ವ್ಯವಸ್ಥೆಗೊಳ್ಳುವ ಸಾಂಸ್ಥಿಕ ರಚನೆಯ ಸಮೂಹವೇ ಸಹಕಾರ.

ಸಹಕಾರದ ಹುಟ್ಟು ಇತ್ತೀಚಿನದಲ್ಲ, ವೇದಗಳ ಕಾಲದ ಇತಿಹಾಸ ಹೊಂದಿದೆ. ಪ್ರಾಚೀನ ಭಾರತದಲ್ಲಿ ಸಹಕಾರವು ಪ್ರಮುಖವಾಗಿ ಮತ್ತು ಕುಳ, ಗ್ರಾಮ, ಶ್ರೇಣಿ ಜಾತಿ ಹೀಗೆ 4 ರೂಪಗಳಲ್ಲಿ ಸಹಕಾರ ಕಂಡುಬರುತ್ತದೆ.

ಕುಳ ಸಂಘಟನೆಯಲ್ಲಿ ಬಂದುಗಳು, ಸ್ನೇಹಿತರು ರಕ್ತ ಸಂಬಂಧಿಗಳು ಮತ್ತು ಇತರರು ಸದಸ್ಯರಾಗಿದ್ದು, ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಲ್ಲಿ ಸಹಕಾರ ಕಂಡುಬಂದರೆ ಗ್ರಾಮ ಮಟ್ಟದಲ್ಲಿ ಗ್ರಾಮದ ಜನರು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು, ಸಹಕಾರ ಪ್ರಮುಖವಾಗುತ್ತದೆ. ಶ್ರೇಣಿಯು ಸಹಕಾರ ಮತ್ತು ಆರ್ಥಿಕ ಸಂಘವಾಗಿದ್ದು ಕೈಗಾರಿಕಾ ಮತ್ತು ಕರಕುಶಲ ಕೆಲಸಗಾರರು. ವ್ಯಾಪಾರಿಗಳು ಬ್ಯಾಂಕರುಗಳು ರೈತರು ಇತ್ಯಾದಿಗಳು ಸಹಕಾರಿ ಸದಸ್ಯರಾಗಿರುತ್ತಾರೆ. ಜಾತಿ ಮಟ್ಟದಲ್ಲಿ ಪ್ರಮುಖ ಸಾಮಾಜಿಕ ಉದ್ದೇಶಗಳಾದ ಶಿಕ್ಷಣ, ಪರಿಹಾರ ಕ್ರಮ, ಸ್ವಚ್ಛತೆ, ಮೊದಲಾದವುಗಳಲ್ಲಿಯೂ ಸಹಕಾರ ಕಂಡು ಬರುತ್ತದೆ.

ಆಧುನಿಕ ಕಾಲದಲ್ಲಿ ಸಹಕಾರಿ ಆಂದೋಲನದ ಮೂಲ ಉದ್ದೇಶವು ಶೋಷಣೆಯನ್ನು ತಪ್ಪಿಸಿ ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸಿ ಗ್ರಾಮೀಣಾಭಿವೃದ್ಧಿಯನ್ನು ಸಾಧಿಸುವುದೇ ಆಗಿದೆ. ಈ ಆಧುನಿಕ ಸಹಕಾರಿ ಆಂದೋಲನದ ಮೂಲ ಪುರುಷರೆಂದರೆ ಜರ್ಮನಿಯ ವೋನ್ ರೈಫಿಜಿನ್ 1818–1888 ಹಾಗೂ ಘೂಲ್ಜ್ ಡಿಲಿಟ್ಜ್–1809–1883, ಆಧುನಿಕ ಕಾಲದ ಸಹಕಾರಿ ಕ್ಷೇತ್ರವನ್ನು 2 ರೀತಿಯನ್ನು

Universal Coaching Centre


www.shikarat.com

ವಿಂಗಡಿಸಲಾಗುತ್ತದೆ. ರೈಫಿಜನ್ ಮಾದರಿ ಮತ್ತು ಘೂಲ್ಜ್ ಡಿಲಿಟ್ಟ್ ಮಾದರಿ. ರೈಫಿಜನ್ ಮಾದರಿ ಗ್ರಾಮಮಟ್ಟದಲ್ಲಿ ಸಹಕಾರ ಸಂಘಗಳನ್ನು ಸಂಘಟಿಸಿದರೆ, ಘೂಲ್ಜ್ ಡಿಲಿಟ್ಟ್ ಮಾದರ್ಲ್ಲಿ ನಗರ ಪ್ರದೇಶದಲ್ಲಿ ಸಹಕಾರ ಸಂಘಟಿಸುತ್ತದೆ.

ಭಾರತದಲ್ಲಿ ಆಧುನಿಕ ಸಹಕಾರಿ ಕ್ಷೇತ್ರ ಬೆಳವಣಿಗೆಯನ್ನು ತಿಳಿಯುವುದಾದರೆ, 19ನೇ ಶತಮಾನದ ಕೊನೆಯ ಭಾಗದಲ್ಲಿ ಗ್ರಾಮೀಣ ಋಣಭಾರ ಅತ್ಯಧಿಕವಾದಾಗ ಮದ್ರಾಸ್ ಸರ್ಕಾರ ಸರ್ ಫೆಡ್ರಿಕ್ ನಿರೋಲ್ಸನ್ ಅವರನ್ನು ಯುರೋಪಿಗೆ ಪರಿಹಾರ ಕ್ರಮ ಕಂಡುಹಿಡಿಯಲು ಕಳುಹಿಸಿ ಪಡೆದ ವರದಿಯಲ್ಲಿ ರೈಫಿಜನ್ ಮಾದರಿ ಸಹಕಾರಿ ಸಂಘ ಸ್ಥಾಪನೆಗೆ ಶಿಫಾರಸ್ಸು ಹಾಗೂ 1901 ರಲ್ಲಿ ರಚನೆಯಾದ ಕ್ಷಾಮ ಪರಿಹಾರ ಸಮಿತಿ ಸಹ ಈ ರೈಫಿಜನ್ ಮಾದರಿ ಅಳವಡಿಕೆಗೆ ಶಿಫಾರಸ್ಸು ನೀಡಿದ ಸಲುವಾಗಿ 1904ರಲ್ಲಿ ಹೊಸ ಸಹಕಾರಿ ಸಂಘಗಳ ಕಾಯ್ದೆ ಜಾರಿಗೆ ಬಂತು. ಇದು ಭಾರತದ ಸಹಕಾರಿ ಕ್ಷೇತ್ರಕ್ಕೆ ಒಂದು ನಿರ್ದಿಷ್ಟ ಕಾನೂನು ಚೌಕಟ್ಟು ದೊರೆತ ಸಹಕಾರಿ ಚಳುವಳಿಗೆ ಅಡಿಪಾಯವಾಯಿತು.

ಕರ್ನಾಟಕ ಸಹಕಾರದ ಮೂಲದ ಬಗ್ಗೆ ತಿಳಿಯುವುದಾದರೆ ಕರ್ನಾಟಕ ಸಹಕಾರಿ ಸಂಘಗಳ ತವರೂರು ಎಂದೇ ಹೇಳಬಹುದು. ಕಾರಣ ಸಹಕಾರಿ ಸಂಘಗಳು ಮೊದಲು ಚಿಗುರೊಡೆದದ್ದು ಕರ್ನಾಟಕದಲ್ಲೇ 1905ರ ಮೇ ತಿಂಗಳ 9ನೇ ದಿನಾಂಕದಂದು ಧಾರವಾಡ ಜಿಲ್ಲೆಯ ಗದಗ – ತಾಲ್ಲೂಕಿನ ಕಣಗಿನ ಹಾಳ ಗ್ರಾಮದಲ್ಲಿ. ಶಿದ್ದನಗೌಡ ಸಣರಾಮನಗೌಡ ಪಾಟೀಲ ಎಂಬುವವರಿಂದ ಮೊದಲ "ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆಯಾಯಿತು. ಹೀಗೆ ಕರ್ನಾಟಕವು ಭಾರತ ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದ ಗುರುತಿಸುವಿಕೆಯನ್ನು ಪಡೆದಿದೆ.

ಸಹಕಾರವು ತನ್ನ ಉದ್ದೇಶ ಸಾಧನೆಗಾಗಿ ಹಾಗೂ ಸಂಮೃದ್ಧ ಬೆಳವಣಿಗೆಗಾಗಿ ತನ್ನ 7 ಮೂಲ ತತ್ವಗಳನ್ನು ತಿಳಿಸುತ್ತದೆ. 1) ಸ್ವಯಂಪ್ರೇರಿತ ಮುಕ್ತ ಸದಸ್ಯತ್ವ 2) ಪ್ರಜಾಸತ್ತಾತ್ಮಕ ನಿಯಂತ್ರಣ ತತ್ವ 3) ಲಾಭಗಳ ಸಮಾನ ಹಂಚಿಕೆ ತತ್ವ 4) ಬಂಡವಾಳದ ಮೇಲೆ ಮಿತವಾದ ಬಟ್ಟಿ 5) ಸಹಕಾರಿಗಳ ನಡುವೆ ಸಹಕಾರ ತತ್ವ 6) ಸಾಮಾಜಿಕ ಕಳಕಳಿ 7) ಸಹಕಾರಿ ಶಿಕ್ಷಣ ಹೀಗೆ ಸಹಕಾರದ ಮೂಲ 7 ತತ್ವಗಳು ಸಹಕಾರದ ಉದ್ದೇಶಕ್ಕೆ ಒಂದು ನಿರ್ದಿಷ್ಟ ಕಾಯಕಲ್ಪ ನೀಡುತ್ತವೆ.

ಸಹಕಾರದ ಮುಖ್ಯ ಲಕ್ಷಣಗಳನ್ನು ತಿಳಿಯುವುದಾದರೆ ಮೊದಲಿಗೆ ಸಹಕಾರ ಸಂಘಗಳು ಸ್ವಯಂ ಪ್ರೇರಿತ ಸಂಘಟನೆಯಾಗಿವೆ ಹಾಗೂ ಮುಕ್ತ ಸದಸ್ಯತ್ವ, ಪರಸ್ಪರ ಸಹಾಯ, ಸೇವಾ ಮನೋಭಾವನೆ, ಪ್ರಜಾಪ್ರಭುತ್ವ ತತ್ವಾಧಾರಿತ ಸಂಘಟನೆ, ಸರ್ವಸದಸ್ಯರ ಕಲ್ಯಾಣ ಪ್ರಮುಖ ಗುರಿ, ಲಾಭದ ನ್ಯಾಯಯುತ ಹಂಚಿಕೆ, ರಾಜಕೀಯ ಮತ್ತು ಧಾರ್ಮಿಕ ನಿರ್ಲಿಪ್ತತೆ, ಲಾಭಕ್ಕೆ ಬದಲಾಗಿ ಸೇವೆಯ ಪ್ರಾಮುಖ್ಯತೆ, ಸಮಾನತೆಯ ಆಧಾರ ಸಾಮಾಜಿಕ ಆರ್ಥಿಕ ಚಳುವಳಿ, ಸಮುದಾಯ ಸೇವೆ ಹೀಗೆ ಸಹಕಾರದ ಲಕ್ಷಣಗಳು ಪರಸ್ಪರ ಸಹಾಯದ ಮೇರೆಗೆ ಆರ್ಥಿಕ ಬೆಳವಣಿಗೆಗೆ ಹಾಗೂ ಸಹಬಾಳ್ವೆಯ ಜೀವನಕ್ಕೆ ಪೂರಕವಾಗಿವೆ.

ಸಹಕಾರವು ಸಂಘಗಳ ಮುಖಾಂತರ ಜನರಿಗೆ ಹಲವು ಪ್ರಯೋಜನವನ್ನು ನೀಡುವ ಮೂಲಕ ತನ್ನ ಪ್ರಾಮುಖ್ಯತೆ ಪಡೆದುಕೊಂಡಿದೆ. ಪ್ರತ್ಯೇಕಗೊಂಡಿರುವ ವ್ಯಕ್ತಿಗಳಿಗೆ ಸಂಘಟನೆಯ ಲಾಭ ನೀಡುತ್ತದೆ. ಕಡಿಮೆ ವೆಚ್ಚದಲ್ಲಿ ಸೇವೆಗಳ ಪೂರೈಕೆ ಈ ಮೂಲಕ ದುರ್ಬಲ ವರ್ಗಗಳ ಏಳಿಗೆ, ಏಕಸ್ವಾಮ್ಯ ಪ್ರವೃತ್ತಿಗಳ ನಿಯಂತ್ರಣ, ಮಾನವ ಅವಶ್ಯಕತೆಗಳ ಪೂರೈಕೆ ಸಂಪತ್ತಿನ ಸಮಾನ ವಿತರಣೆ, ಮಾಸ ಮಾರಾಟ ಚಟುವಟಿಕೆಗಳ ನಿರ್ಮೂಲನ, ಮಧ್ಯವರ್ತಿಗಳ ನಿರ್ಮೂಲನ, ಶ್ರಮಿಕರಿಗೆ ಯೋಗ್ಯ ಉಪಚಾರ, ಗ್ರಾಮೀಣ ಋಣಭಾರಕ್ಕೆ ತಡೆ, ಸಾಮಾಜಿಕ ನ್ಯಾಯ, ಕೃಷಿ ಬೆಲೆ ನಿಯಂತ್ರಣ, ಜನರ ಆರ್ಥಿಕ ಉಳಿತಾಯಕ್ಕೆ ಪ್ರೇರಣೆ, ಸಹಕಾರಿ ಸಾಗುವಳಿ ಬೇಳೆ ವಿಧಾನ ಅಳವಡಿಕೆ.

ಹೀಗೆ ಸಹಕಾರ (ಸಂಘಗಳು) ಆಂದೋಲನ ಜನರಿಗೆ ವೈವಿಧ್ಯಮಯ ಸಹಕಾರಿ ಸೇವೆಗಳ ಪೂರೈಕೆ ನೀಡುತ್ತದೆ.

ಸಹಕಾರಿ ಕ್ಷೇತ್ರವು ಕೇವಲ ಕೆಲವೇ (ವಲಯ) ನಿರ್ದಿಷ್ಟ ವಿಷಯಗಳಿಗೆ ಸೀಮಿತವಾಗಿಲ್ಲ ಅದು ಹಲವು ಕ್ಷೇತ್ರಗಳಿಗೆ ತನ್ನ ಕೈ ಚಾಚಿದೆ. ಅವುಗಳೆಂದರೆ ಸಹಕಾರಿ ಸಾಲ ವಲಯ, ಸಹಕಾರಿ ಮಾರುಕಟ್ಟೆ ವಲಯ, ಸಹಕಾರಿ ಸಂಸ್ಕರಣ ವಲಯ, ಸಹಕಾರಿ ಕ್ಷೀರ ವಲಯ, ಸಹಕಾರಿ ಗ್ರಾಹಕ ವಲಯ, ಸಹಕಾರಿ ವಲಯ, ಸಹಕಾರಿ ನೌಕರರ ವಲಯ, ಬೃಹತ್ ಪ್ರಮಾಣದ ಗಿರಿಜನರ ವಿವಿಧೋದ್ದೇಶ ಸಹಕಾರಿ ಸಂಘಗಳು ಹಾಗೂ ಆರೋಗ್ಯ ಸಹಕಾರ, ಕೃಷಿ ಮೀನುಗಾರಿಕೆ, ಕೈಗಾರಿಕೆ, ರೇಷ್ಮೆ ನೀರು ಬಳಕೆದಾರ, ಮಹಿಳಾ ವಿವಿಧೋದ್ದೇಶ, ಸೌಹಾರ್ದ ಸಹಕಾರ ಇತ್ಯಾದಿ ಕ್ಷೇತ್ರಗಳ ಮೂಲ ಜನರ ಅಮೂಲಾಗ್ರ ಬೆಳವಣಿಗೆಗೆ ಸಹಕಾರಿಯಾಗಿದೆ.

ಕರ್ನಾಟಕದ ಸಹಕಾರ ಕ್ಷೇತ್ರದ ಬಗ್ಗೆ ತಿಳಿಯುವುದಾದರೆ ಕರ್ನಾಟಕ ಭಾರತ ಸಹಕಾರ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಮೊದಲ ಕೃಷಿ ಸಾಲ ಸಹಕಾರ ಸಂಘವನ್ನು ಸ್ಥಾಪಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಯ ಜೊತೆಗೆ ಸಹಕಾರ ಆಂದೋಲನವನ್ನು ಸಂಮೃದ್ಧವಾಗಿ ಬೆಳೆಸುವಲ್ಲಿ ಯಶಸ್ವಿಯಾಗಿದೆ.

ಶಿದ್ದನಗೌಡ ಸಣ್ಣ ರಾಮನಗೌಡ ಪಾಟೀಲರನ್ನು ಕರ್ನಾಟಕದ ಸಹಕಾರ ಚಳುವಳಿಯ ಪಿತಾಮಹರಾಗಿದ್ದು, ಅವರು ಸ್ಥಾಪಿಸಿದ ಕೃಷಿ ಪತ್ತಿನ ಸಹಕಾರ ಸಂಘವು ರೈತರ ಸಣ್ಣ ಉತ್ಪಾದಕರ ಮತ್ತು ಸಮಾಜದ ಇತರ ದುರ್ಬಲ ವರ್ಗಗಳ ಜನರ ಹಿತಾಸಕ್ತಿಗಳನ್ನು


www.shikarat.com

ರಕ್ಷಿಸಲು ಸಹಕಾರವು ಒಂದು ಉತ್ತಮ ಸಾಧನವಾಗಿದೆ. ಹೀಗೆ ಚಿಗುರೊಡೆದ ಸಹಕಾರ ಚಳುವಳಿಯು ಬೃಹತ್ ಹೆಮ್ಮರವಾಗಿ ಬೆಳೆಯುತ್ತಾ ಹೋಯಿತು. 1912ರಲ್ಲಿ ಭಾರತ ಸರ್ಕಾರದಿಂದ ಸಹಕಾರ ಸಂಘಗಳ ಕಾಯಿದೆಯ ಜಾರಿಯೊಡನೆ ರಾಜ್ಯದಲ್ಲಿ ಇತರ ಕ್ಷೇತ್ರಗಳಾದ ಗ್ರಾಹಕ ಸಹಕಾರ ಸಂಘಗಳು ಮಾರಾಟ ಸಹಕಾರ ಸಂಘ, ಗೃಹ ನಿರ್ಮಾಣ ಸಹಕಾರ ಸಂಘಗಳು ಸ್ಥಾಪನೆಯಾದವು. ಹಾಗೇ ಯೋಜನಾವಧಿಯಲ್ಲಿ ಸಹಕಾರವು ಅರ್ಥವ್ಯವಸ್ಥೆಯ ಒಂದು ವಿಶಿಷ್ಟ ವಲಯ ಎಂದು ಪರಿಗಣಿಸಲ್ಪಟ್ಟಿತು. 1960ರ ದಶಕದಲ್ಲಿ ಆಹಾರ ವಲಯದಲ್ಲಿ ಸ್ವಾವಲಂಬನೆಯ ಸಾಧನೆಗಾಗಿ ಅಳವಡಿಸಲಾದ ಹಸಿರು ಕ್ರಾಂತಿ ಎಂಬ ಹೆಸರಿನ ನೂತನ ಕೃಷಿ ತಂತ್ರದ ಫಲವಾಗಿ ರಾಜ್ಯದಲ್ಲಿ ಸಹಕಾರ ಸಂಘಗಳು ಬೆಳೆದವು.

ಪ್ರಸ್ತುತ ಕರ್ನಾಟಕದಲ್ಲಿ 2015ರ ವೇಳೆಗೆ 32627 ಸಹಕಾರ ಸಂಘಗಳು ಸ್ಥಾಪನೆಯಾಗಿ ಕಾರ್ಯನಿರ್ವಹಿಸುತ್ತಿವೆ. ಹಾಗೆ ಬಹುರಾಜ್ಯ ಸಹಕಾರ ಸಂಘಗಳು 15 ರಾಜ್ಯ ಸಹಕಾರ ಒಕ್ಕೂಟಗಳ 31 ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು (ಆಜಛಿಜಟಛಜಡಿ) 21 ಇದ್ದು, ಕಾರ್ಯ ನಿರ್ವಹಿಸುತ್ತಿವೆ.

ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಸಹಕಾರ (ಕಐಆ) ಬ್ಯಾಂಕುಗಳು 129 ಇದ್ದು ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತವೆ ಹಾಗೂ ಜನರಿಗೆ ನಾನಾ ಸೇವೆಗಳನ್ನು ಒದಗಿಸುವ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು (ಕಂಅಖ) ಮತ್ತು 5351 ಮತ್ತು ಗಿರಿಜನ ದೊಡ್ಡ ಪ್ರಮಾಣದ ವಿವಿಧೊದ್ದೇಶ ಸಹಕಾರ ಸಂಘಗಳು 25 ಇದ್ದು, ಗಿರಿಜನ ಹಾಗೂ ಆದಿವಾಸಿಗಳಿಗೆ ಸೇವೆಗಳನ್ನು ಒದಗಿಸುತ್ತಿವೆ.

ಕರ್ನಾಟಕದ ಸಹಕಾರ ಕ್ಷೇತ್ರ ಹೀಗೆ ಸಂಮೃದ್ಧವಾಗಿ ಬೆಳೆಯಬೇಕಾದರೆ ಹಲವು ಮಹನೀಯರ ಕೊಡುಗೆ ಹಾಗೂ ಕರ್ನಾಟಕ ಸರ್ಕಾರ ಜಾರಿಗೆ ತಂದ ಸಹಕಾರ ಕಾನೂನು ಹಾಗೂ ಯೋಜನೆಗಳು ಸುಧಾರಣಾ ಕ್ರಮಗಳು ಕಾರಣವಾಗುತ್ತವೆ.

ಕರ್ನಾಟಕದ ಸಹಕಾರ ಕ್ಷೇತ್ರ ಬೆಳೆಸಿದ ಮಹನೀಯರಲ್ಲಿ ಮೊಳಹಳ್ಳಿ ಶಿವರಾಯರು ಪ್ರಮುಖರು. ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರ ಚಳುವಳಿಯನ್ನು ಕಟ್ಟಿ ಬೆಳೆಸಿದವರು. ಸಹಕಾರವೆಂದರೆ ಶಿವರಾಯರಿಗೆ ಧರಿಸುವ ಅಂಗಿಯಲ್ಲಿ ಮೈಯ ಮಾಂಸ ಅದು ಅವರಿಗೆ ಮಾತಿನ ರೀತಿಯಲ್ಲಿ ಬಾಳಿನ ಹಾದಿಯಾಗಿತು ಎಂದು ಹೇಳಲಾಗುತ್ತಿತ್ತು.

ಒಟ್ಟಾರೆ ಕರ್ನಾಟಕ ಕರಾವಳಿ ತೀರದ ಸಹಕಾರ ಚಳುವಳಿಯ ಪಿತಾಮಹ ಎಂದು ಕರೆಸಿಕೊಳ್ಳುವ ಶಿವರಾಯರು, ಜಿಲ್ಲೆಯ ಉದ್ದಗಲಕ್ಕೂ ಕಾಲ್ನಡಿಗೆಯಲ್ಲಿಯೇ ಸಂಚರಿಸಿ ಸಹಕಾರ ಚಳುವಳಿಯನ್ನು ಹುಟ್ಟುಹಾಕಿದರು. ಶಿವರಾಯರು ಸಹಕಾರ ಚಳುವಳಿಗೆ ಜನ್ಮನೀಡಿದುದೇ ಅಲ್ಲದೆ ಅದಕ್ಕೆ ನೀರೆರೆದು ಪೋಷಿಸಿ, ಅದರ ಬೆಳವಣಿಗೆಗೆ ಬೆಂಗಾವಲಾಗಿ ನಿಂತರು.

ಶಿವರಾಯರು ಮತ್ತೂರಿಗೆ ವಲಸೆ ಹೋಗಿ ಅಲ್ಲಿ ನೆಲೆ ನಿಂತು, ಪುತ್ತೂರಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಸಹಕಾರ ಚಳುವಳಿಯು ಉತ್ತಮವಾಗಿ ಬೆಳೆಯುವಂತೆ ಮಾಡಿದರು. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬಹುತೇಕ ಸಹಕಾರ ಸಂಘಗಳು ಮತ್ತೂರಿನಲ್ಲಿ ಸ್ಥಾಪನೆಯಾದವು ಹಾಗಾಗಿ ಪುತ್ತೂರು ಸಹಕಾರ ಚಳವಳಿಯ ಮೆಕ್ಕಾ ಎಂದು ಕರೆಯಲಾಗುತ್ತದೆ. ಇದರ ಕೀರ್ತಿ ಶಿವರಾಯರಿಗೆ ಸಲ್ಲುತ್ತದೆ.

ಹೀಗೆ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಸಹಕಾರ ಚಳುವಳಿ ಹೆಚ್ಚು ವಿಸ್ತರಿಸುವುದರ ಜೊತೆಗೆ 1913ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಬ್ಯಾಂಕು ಸ್ಥಾಪನೆಯಾದದ್ದು. ಕರ್ನಾಟಕ ಸಹಕಾರ ಬೆಳವಣಿಗೆಯ ಉತ್ತುಂಗವನ್ನು ಬಿಂಬಿಸುತ್ತದೆ.

ಹೀಗೆ ದುರ್ಬಲ ರೈತಾಪಿ ಜನರ ಹಿತಾಶಕ್ತಿಯನ್ನು ರಕ್ಷಿಸುವ ಉದ್ದೇಶದ ಮೇರೆಗೆ ಚಿಗುರೊಡೆದ ಕರ್ನಾಟಕ ಸಹಕಾರ ಚಳುವಳಿಯು ತನ್ನ ಬೆಳವಣಿಗೆ ಹಾದಿಯಲ್ಲಿ ಹಲವಾರು ಪ್ರಗತಿಪರ ಯೋಜನೆಗಳನ್ನು ಜಾರಿಗೆ ತಂದು ಅನುಷ್ಠಾನಗೊಳಿಸಿತು. ಅವುಗಳಲ್ಲಿ "ಮೊದಲಿಗೆ ವ್ಯವಹಾರ ಅಭಿವೃದ್ಧಿ ಯೋಜನೆ" 1995–96 ರಲ್ಲಿ ಜಾರಿಗೆ ಬಂತು. ಜಾಗತೀಕರಣ ಮತ್ತು ಖಾಸಗೀಕರಣ ಖಾಸಗೀಕರಣ ಎದುರಿನಲ್ಲಿ ಸಹಕಾರಿ ಸಂಸ್ಥೆಗಳು ಸಾರ್ವಜನಿಕವಲಯ ಮತ್ತು ಖಾಸಗಿ ವಲಯದಿಂದ ತೀವ್ರ ಸ್ಪರ್ಧೆಯನ್ನು ಎದುರಿಸುವ ನಿಟ್ಟಿನಲ್ಲಿ ಜಾರಿಗೆ ಬಂತು. ಬರಿ ಕೃಷಿ ಪತ್ತಿನಲ್ಲಿ (ಸಾಲಕ್ಕೆ) ಸೀಮಿತವಾಗಿದ್ದ ಪತ್ತಿನ ಸಹಕಾರ ಸಂಘಗಳು ಇತರೇ ಕ್ಷೇತ್ರಗಳಿಗೂ ಸಾಲವನ್ನು ನೀಡುವ ಹಾಗೂ (ಸಾಲೇತ್ತರ) ಪತ್ತೇತ್ತರ ಚಟುವಟಿಕೆ ಅಂದರೆ ಬ್ಯಾಂಕೋದ್ಯಮ ಚಟುವಟಿಕೆಯನ್ನು ಅಳವಡಿಸಿಕೊಂಡು ಲಾಭಗಳಿಸುವ ಯೋಜನೆಯಾಗಿದೆ.

"ಕಿಸಾನ್ ಕ್ರೆಡಿಟ್ ಕಾರ್ಡ್" ರೈತ ಸಮುದಾಯದ ಜನರಿಗೆ ಸಕಾಲಿಕ ಮತ್ತು ಸಾಕಷ್ಟು ಪ್ರಮಾಣದ ಸಾಲವನ್ನು ಒದಗಿಸಲು 1997–98ರಲ್ಲಿ ಈ ಯೋಜನೆ ಜಾರಿಗೆ ತರಲಾಯಿತು.

ಸ್ವಸ್ವಹಾಯ ಗುಂಪುಗಳು ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದು ಅವುಗಳ ಮೂಲಕ ಉಳಿತಾಯವನ್ನು ಕ್ರೋಢೀಕರಿಸುವ ಮೂಲಕ ಜನರಲ್ಲಿ ಉಳಿತಾಯ ಮನೋಭಾವನೆಯನ್ನು ಬೆಳೆಸುವ ಉದ್ದೇಶ ಹೊಂದಲಾಗಿದೆ. ಪ್ರಸ್ತುತ ಕರ್ನಾಟಕದಲ್ಲಿ 1.5 ಲಕ್ಷ ಸ್ವಸಹಾಯ ಗುಂಪುಗಳಿದ್ದು, 350 ಕೋಟಿ ಉಳಿತಾಯವಾಗಿದ್ದು, ಪಡೆದ ಸಾಲ ಸುಮಾರು 680 ಕೋಟಿ ಆಗಿರುತ್ತದೆ.


Universal Coaching Centre
www.shikarat.com

ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ಸುರಕ್ಷಾ ಯೋಜನೆ ಕರ್ನಾಟಕ ಸರ್ಕಾರವು "ಯಶಸ್ವಿನಿ" ಎಂಬ ಹೆಸರಿನ ಸಹಕಾರಿ ರೈತರ ಆರೋಗ್ಯ ಸುರಕ್ಷತೆಯ ಒಂದು ವಿನೂತನ ಯೋಜನೆಯನ್ನು ಜಾರಿಗೆ ತಂದಿದೆ. ಇದು ಪ್ರಪಂಚದಲ್ಲಿಯೇ ಒಂದು ಹೊಸ ನವಪ್ರವರ್ತನೆ ಎಂದು ಬಣ್ಣಿಸಲಾಗಿದೆ. ಇದನ್ನು ಜೂನ್ 1, 2003ರಂದು ಪ್ರಾರಂಭಿಸಲಾಯಿತು.

ಸಮಗ್ರ ಸಹಕಾರಿ ಅಭಿವೃದ್ಧಿ ಪರಿಯೋಜನೆ 1988ರಿಂದ ಜಾರಿಗೆ ತಂದ ಯೋಜನೆಯಾಗಿದ್ದು ಎಲ್ಲಾ ಸಹಕಾರಿ ಬ್ಯಾಂಕುಗಳಿಗೆ ಹಣಕಾಸಿನ ಸಹಾಯವನ್ನು ನೀಡುವುದು ಈ ಯೋಜನೆಯ ಉದ್ದೇಶ.

ಕರ್ನಾಟಕ ಕೃಷಿ ಮಾರುಕಟ್ಟೆ ನೀತಿ – 2013ನ್ನು ಸಹಕಾರ ಇಲಾಖೆ ಜಾರಿಗೆ ತಂದಿದ್ದು ಇದರಿಂದ ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯುವಂತೆ ಮಾಡುವುದಾಗಿದೆ ಮತ್ತು ಮಾರಾಟದಲ್ಲಿ ಪಾರದರ್ಶಕತೆಯನ್ನು ತರಲು ಮತ್ತು ಮಾರುಕಟ್ಟೆ ಪ್ರಾಂಗಣದಲ್ಲಿ ಜರುಗುವ ವಿವಿಧ ಚಟುವಟಿಕೆಗಳನ್ನು ಸರಳೀಕರಣಗೊಳಿಸಲು ಸಾಧ್ಯವಾಗುತ್ತದೆ. ಹಾಗೆ 2014–15ನೇ ಸಾಲಿನ್ಲಿ ಜಾರಿಗೆ ತಂದ ಕಾಯಕ ನಿಧಿ ಯೋಜನೆಯು ಮಾರುಕಟ್ಟೆ ಪ್ರಾಂಗಣದಲ್ಲಿ ಕರ್ತವ್ಯನಿರ್ವಹಿಸುವ ಹಮಾಲಿಗಳ ಕಲ್ಯಾಣಕ್ಕಾಗಿ ಜಾರಿಗೆ ತಂದ ಯೋಜನೆಯಾಗಿದೆ.

2013ರಲ್ಲಿ ಸಹಕಾರ ಚುನಾವಣಾ ಆಯೋಗವನ್ನು ಜಾರಿಗೆ ತರುವ ಮೂಲಕ ಸಹಕಾರ ಸಂಘಗಳು ಕಾಲಕಾಲಕ್ಕೆ ಚುನಾವಣೆ ನಡೆಸಿ ಉತ್ತಮ ಕಾರ್ಯ ನಿರ್ವಹಣೆಗೆ ಅನುಕೂಲವಾಗಲು ಹಾಗೂ ಚುನಾವಣಾ ವ್ಯಾಜ್ಯಗಳನ್ನು ಬಗೆಹರಿಸಲು ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ಸಹಕಾರ ಚುನಾವಣಾ ಆಯೋಗ ಜಾರಿಗೆ ತಂದ ಭಾರತದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಸಹಕಾರ ಚಳುವಳಿ ಪಾತ್ರವಾಗಿದೆ.

ಸಹಕಾರಿ ಆಂದೋಲನವು ಬೆಳವಣಿಗೆಯ ಹಾದಿಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತದೆ. ಅವುಗಳಲ್ಲಿ ಮುಖ್ಯವಾಗಿ ಅದ್ಯಕ್ಷತೆಯು ಸಹಕಾರಿ ಸಂಸ್ಥೆ ನಿರ್ದೇಶಕರು, ಸದಸ್ಯರಲ್ಲಿ ಹಾಗೂ ಸಿಬ್ಬಂದಿಗಳಲ್ಲಿ ತಾಂಡವವಾಡುತ್ತಿದೆ. ಅನಗತ್ಯ ರಾಜಕೀಯ ಹಸ್ತಕ್ಷೇಪ ಸಹಕಾರಿ ಕ್ಷೇತ್ರವನ್ನು ನಿಯಂತ್ರಿಸುತ್ತಿದೆ. ಹಾಗಾಗಿ ಸಹಕಾರಿ ಕ್ಷೇತ್ರ ದುರ್ಬಲವಾಗುತ್ತಿದೆ. ಹಣಕಾಸಿನ ಕೊರತೆ, ಸಹಕಾರಿ ಸಂಸ್ಥೆಗಳು ತಮ್ಮ ದೈನಂದಿನ ಚಟುವಟಿಕೆಗಳನ್ನು ಹಾಗೂ ಆಡಳಿತ ನಡೆಸಲು ಹಣಕಾಸಿನ ತೊಂದರೆ ಅನುಭವಿಸುತ್ತಿವೆ. ಉತ್ತಮ ತರಬೇತಿ ಮತ್ತು ಪ್ರಚಾರದ ಕೊರತೆಯಿಂದ ಸಹಕಾರ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಲಾಗುತ್ತಿಲ್ಲ.

ಸರ್ಕಾರದ ಸಾಲಮನ್ನಾ ಯೋಜನೆಗಳಿಂದ ತೀವ್ರನಷ್ಟ ಅನುಭವಿಸುತ್ತಿರುವ ಪ್ರಾಥಮಿಕ ಕೃಷಿ ಸಹಕಾರೀ ಸಂಘಗಳು ಮತ್ತು ವಸೂಲಾಗದೆ ಉಳಿದ ಮಿತಿಮೀರಿದ ಸಾಲಗಳ ಬಾಕಿ ಸಹಕಾರ ಸಂಘಗಳ ದೊಡ್ಡ ಸಮಸ್ಯೆ ಹಾಗೂ ಸಹಕಾರಿ ಆಂದೋಲನವು ಇಡೀ ಭಾರತದಾದ್ಯಂತ ಏಕರೂಪವಾಗಿ ಬೆಳವಣಿಗೆಯನ್ನು ಹೊಂದಿಲ್ಲ. ಈ ಅಸಮಾನತೆಯು ಸಹಕಾರ ಸಂಸ್ಥೆಗಳನ್ನು ಒಂದು ಚೌಕಟ್ಟಿನಲ್ಲಿ ತಂದು ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿಲ್ಲ.

ಈ ಮೇಲಿನ ಸಹಕಾರ ಆಂದೋಲನದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರ ಹಾಗೂ ಸಹಕಾರ ಸಂಸ್ಥೆಗಳು ಹಲವಾರು ಸುಧಾರಣಾ ಕ್ರಮಗಳನ್ನು ಜಾರಿಗೆ ತಂದವು. ಅವುಗಳಲ್ಲಿ ಮುಖ್ಯವಾಗಿ ಸಾಲ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ, ಸಿಬ್ಬಂದಿಗೆ ಸೂಕ್ತ ಶಿಕ್ಷಣ ಮತ್ತು ತರಬೇತಿ, ಹಣಕಾಸಿನ ಸಂಪನ್ಮೂಲಗಳ ಕ್ರೋಢೀಕರಣ, ಸಹಕಾರ ತತ್ವಗಳನ್ನು ಚಾಚೂ ತಪ್ಪದೆ ಪಾಲಿಸುವುದು, ಸಹಕಾರ ಕ್ಷೇತ್ರದ ಉದ್ದೇಶ ಮತ್ತು ತತ್ವಗಳನ್ನು ಸಹಕಾರ ನಿರ್ದೇಶಕರು ಸಿಬ್ಬಂದಿ ಹಾಗೂ ಸಂಬಂಧಿಸಿದ ಎಲ್ಲರಿಗೂ ತಿಳುವಳಿಕೆ ಮೂಡಿಸುವುದು, ಜೊತೆಗೆ ಪ್ರಚಾರ ಕಾರ್ಯ ಕೈಗೊಳ್ಳುವುದು, ಸರ್ಕಾರದ ಹಸ್ತಕ್ಷೇಪದಿಂದ ಮುಕ್ತಿ ಪಡೆಯುವುದು, ಆದಷ್ಟು ಸ್ವತಂತ್ರವಾಗಿ ಕಾರ್ಯ4 ನಿರ್ವಹಿಸುವ ವಾತಾವರಣವನ್ನು ಸೃಷ್ಟಿಸಿಕೊಡುವುದು.

ಸಹಕಾರಿ ಸಂಘಗಳ ಆಡಳಿತ ಮಂಡಳಿಗಳು ಸದಸ್ಯರ ಹಾಗೂ ನಿರ್ದೇಶಕರ ಮಂಡಳಿಗಳ ಸದಸ್ಯರುಗಳಲ್ಲಿ ಹಲವಾರು ರೀತಿಯ ಹಣಕಾಸಿನ ದುರುಪಯೋಗಗಳು, ಅವುಗಳನ್ನು ತಡೆಯುವುದು. ಸಹಕಾರಿ ಸಂಘಗಳ ಕಂಪ್ಯೂಟರೀಕರಣ ಹಾಗೂ ಸಹಕಾರೀ ಸಂಸ್ಥೆಗಳಲ್ಲಿ ಯೋಗ್ಯ ಅನುಭವ, ಶಿಕ್ಷಣ, ತರಬೇತಿ ಪಡೆದ ನುರಿತ ಹಾಗೂ ದಕ್ಷ ಅಧಿಕಾರಿಗಳನ್ನು ನೇಮಿಸಬೇಕು ಹಾಗೂ ನಷ್ಟದಲ್ಲಿರುವ ಹಾನಿಗೊಳಗಾದ ದೀವಾಳಿಯಾಗಿರುವಂತಹ ಸಹಕಾರಿ ಸಂಘಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ, ವಾಣಿಜ್ಯ ಬ್ಯಾಂಕುಗಳು ನಬಾರ್ಡ್ ಹಾಗೂ ಭಾರತೀಯ ರಿಸರ್ವ್‌ಬ್ಯಾಂಕ್ ಮುಂತಾದವುಗಳು ಅಗತ್ಯ ಹಣಕಾಸಿನ ಸಹಾಯ ಒದಗಿಸಬೇಕು.

ಒಟ್ಟಾರೆ ಸಹಕಾರ ಕ್ಷೇತ್ರ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕನಸನ್ನು ನನಸು ಮಾಡುವಲ್ಲಿ ಪ್ರಮುಖ ಪಾತ್ರ ಮಾನವನ ಜೀವನದ ಉದ್ದಕ್ಕೂ ಒಂದಲ್ಲಾ ಒಂದು ರೀತಿಯಲ್ಲಿ ಅವಶ್ಯವಾಗಿದ್ದು ಅವನ ಸಹಬಾಳ್ವೆ ಹಾಗೂ ಸಂಮೃದ್ಧ ಬದುಕಿಗೆ ಮೂಲ ಸಾಧನವಾಗಿದೆ. ಈ ನಿಟ್ಟನಲ್ಲಿ ಸಹಕಾರ ಕ್ಷೇತ್ರವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಮಾನವನಿಗೆ ಅನಿವಾರ್ಯವಾಗಿದೆ ಹಾಗೂ ಸಹಕಾರದ ಮೂಲ ತತ್ವಗಳನ್ನು ಪಾಲಿಸುವುದರ ಜೊತೆಗೆ, ಸಹಕಾರದ ವರ್ಣಮಯ ಕ್ಷೇತ್ರಗಳನ್ನು ವಿಸ್ತರಿಸಬೇಕಿದೆ.


www.shikarat.com

ಶ್ರೀಕಾಂತ ಎಂ.ಕೆ.

### 35. ರಾಷ್ಟ್ರೀಯ ಅಭಿವೃದ್ಧಿಗೆ ಬಾಹ್ಯಾಕಾಶ ತಂತ್ರಜ್ಞಾನ ಬಳಕೆ

ಭಾರತದ ಬಾಹ್ಯಾಕಾಶ ಕಾರ್ಯಕ್ರಮ ಆರಂಭದ ದಿನದಿಂದಲೂ ರಾಷ್ಟ್ರೀಯ ಅಭಿವೃದ್ಧಿಯ ದೃಷ್ಟಿಕೋನವನ್ನು ಹೊಂದಿತ್ತು. ಇಂಥ ಶ್ರೇಷ್ಠ ಬಾಹ್ಯಾಕಾಶ ತಂತ್ರಜ್ಞಾನವನ್ನು ಸಮಾಜದ ಲಾಭಕ್ಕಾಗಿ ಅದರಲ್ಲೂ ಪ್ರಮುಖವಾಗಿ ಸಮಾಜದ ತೀರಾ ಕೆಳಹಂತದಲ್ಲಿರುವ ವ್ಯಕ್ತಿಗಳ ಕಲ್ಯಾಣಕ್ಕೆ ಬಳಸಿಕೊಳ್ಳುವುದು ಭಾರತದ ಬಾಹ್ಯಾಕಾಶ ನೀತಿಯ ಗುರಿಯಾಗಿತ್ತು.

ಕಳೆದ ಮೂರು ದಶಕಗಳಲ್ಲಿ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಆಗಿರುವ ಗಣನೀಯ ಪ್ರಗತಿಯು, ಈ ತಂತ್ರಜ್ಞಾನವನ್ನು ಮನುಕುಲದ ಅಥವಾ ಮಾನವ ಸಮಾಜದ ಕಲ್ಯಾಣಕ್ಕೆ ಬಳಸಿಕೊಳ್ಳುವ ಸಾಧ್ಯತೆಯನ್ನು ಎತ್ತಿ ತೋರಿಸಿದೆ. ಜಾಗತಿಕ ಸಂವಹನ ಸಾಧಿಸಲು ಬಾಹ್ಯಾಕಾಶ ವೇದಿಕೆಯನ್ನು ಬಳಸಿಕೊಳ್ಳಲಾಗುತ್ತಿದೆ. ತೀರಾ ಗ್ರಾಮೀಣ ಹಾಗೂ ಗುಡ್ಡಗಾಡು ಪ್ರದೇಶದ ಜತೆಗೆ ಕೂಡಾ ವಿಶ್ವಾದ್ಯಂತ ಸಂಪರ್ಕ ಸಾಧಿಸಲು ಬಾಹ್ಯಾಕಾಶ ತಂತ್ರಜ್ಞಾನ ಅನುವು ಮಾಡಿಕೊಟ್ಟಿದೆ. ಹವಾಮಾನ ಮೇಲ್ವಿಚಾರಣೆ ಮತ್ತು ಹವಾಮಾನ ಮುನ್ಸೂಚನೆ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಕಣ್ಗಾವಲು ಮತ್ತು ನಿರ್ವಹಣೆಗೆ ಕೂಡಾ ಇದು ಸಹಕಾರಿಯಾಗಿದ್ದು ಈ ಮೂಲಕ ಮಾನವ ಸಮಾನಕ್ಕೆ ಮಹತ್ವದ ಕೊಡುಗೆಯನ್ನು ನೀಡುತ್ತಿದೆ. ಕ್ಷಿಪ್ರ ಹಾಗೂ ವ್ಯಾಪಕ ಪ್ರಗತಿಯನ್ನು ಸಾಧಿಸಿದ ಹಿನ್ನೆಲೆಯಲ್ಲಿ ಭಾರತದಲ್ಲಿ ದೂರಸಂವೇದಿ ತಂತ್ರಜ್ಞಾನ ವೈವಿಧ್ಯಮಯ ಕ್ಷೇತ್ರಗಳಾದ ಎಕರೆವಾರು ಕೃಷಿ ಬೆಳೆ ಮತ್ತು ಇಳುವಳಿಯನ್ನು ಅಂದಾಜು ಮಾಡಲು, ಬರದ ಮುನ್ಸೂಚನೆ ಮತ್ತು ಮೌಲ್ಯಮಾಪನ, ಪ್ರವಾಹ ನಿಯಂತ್ರಣ ಮತ್ತು ಹಾನಿ ಅಂದಾಜು, ಭೂಬಳಕೆ ಮತ್ತು ಭೂ ರಕ್ಷಾ ನಕ್ಷೆ, ಬಂಜರುಭೂಮಿ ನಿರ್ವಹಣೆ, ನಗರಾಭಿವೃದ್ಧಿ, ಖನಿಜ ಅಂದಾಜು ಮಾಡುವುದು, ಅರಣ್ಯ ಸಮೀಕ್ಷೆಯಂಥ ಕಾರ್ಯಗಳಿಗೆ ಬಳಕೆಯಾಗುತ್ತಿದೆ. ಅಂದರೆ ದೇಶದ ಅಭಿವೃದ್ಧಿಯ ಬಹುತೇಕ ಎಲ್ಲ ಅಂಶಗಳನ್ನು ಇದು ಒಳಗೊಳ್ಳುತ್ತದೆ. ಬಾಹ್ಯಾಕಾಶ ತಂತ್ರಜ್ಞಾನವು ಸಂಪರ್ಕ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳಿಗೆ ಕಾರಣವಾಗಿದೆ. ಅದರಲ್ಲೂ ಮುಖ್ಯವಾಗಿ ದೂರ ಸಂಪರ್ಕ, ರಾಷ್ಟ್ರವ್ಯಾಪಿ ಟಿವಿ ಮತ್ತು ರೇಡಿಯೊ ಪ್ರಸಾರ ಕ್ಷೇತ್ರದಲ್ಲೂ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದೆ.

ಸೂಕ್ತವಾದ ಯೋಜನೆಗಳನ್ನು ರೂಪಿಸುವುದು ಮತ್ತು ಬಾಹ್ಯಾಕಾಶ ತಂತ್ರಜ್ಞಾನದ ಗರಿಷ್ಠ ಬಳಕೆಯಿಂದ ಭಾರತವು ಮುಂದಿನ ಶತಮಾನವನ್ನು ಪ್ರವೇಶಿಸುವ ವೇಳೆಗೆ ಎಲ್ಲ ರಾಷ್ಟ್ರೀಯ ಸಮಸ್ಯೆಗಳನ್ನು ಅದರಲ್ಲೂ ಮುಖ್ಯವಾಗಿ ಹಸಿವು ಮತ್ತು ಅನಕ್ಷರತೆಯನ್ನು ನಿವಾರಿಸಲು ಸಹಕಾರಿಯಾಗಲಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

ಭಾರತದಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಉಗಮದ ಕಾಲದಿಂದಲೂ, ಬಾಹ್ಯಾಕಾಶ ತಂತ್ರಜ್ಞಾನವನ್ನು ಸಮಗ್ರವಾಗಿ ದೇಶದ ಅಭಿವೃದ್ಧಿಗೆ ಗುರುತಿಸಲಾದ ಕ್ಷೇತ್ರಗಳಲ್ಲಿ ಬಳಕೆ ಮಾಡಿಕೊಳ್ಳುವ ದೃಷ್ಟಿಕೋನವನ್ನು ಹೊಂದಲಾಗಿತ್ತು. ಅಭಿವೃದ್ಧಿಯ ಉತ್ತಮ ಮಾರ್ಗದಲ್ಲಿ ಅದರಲ್ಲೂ ಮುಖ್ಯವಾಗಿ ತಂತ್ರಜ್ಞಾನ ಅಭಿವೃದ್ಧಿ, ಪ್ರಯೋಗಾತ್ಮಕ ಕಾರ್ಯಕ್ತಮ, ಅನ್ವಯಿಸುವಿಕೆ ಅಭಿವೃದ್ಧಿ ಮತ್ತಿತರ ಕ್ಷೇತ್ರಗಳಲ್ಲಿ ಬಾಹ್ಯಾಕಾಶ ಸೇವೆಯ ಸಕಾಲಿಕ ನಿರ್ವಹಣೆ ಮಾಡಲಾಗಿದೆ. ಬಾಹ್ಯಾಕಾಶ ತಂತ್ರಜ್ಞಾನದ ಪ್ರತಿಯೊಂದು ಪ್ರಯೋಜನ ಕೂಡಾ ತಳಮಟ್ಟವನ್ನು ತಲುಪುವಂತೆ ಮಾಡುವುದು ಭಾರತದ ಬಾಹ್ಯಾಕಾಶ ಕಾರ್ಯಕ್ರಮದ ಮುಖ್ಯ ಧ್ಯೇಯವಾಗಿತ್ತು. ಭಾರತದ ಕಾರ್ಯನಿರ್ವಹಿಸುತ್ತಿರುವ ಐಆರ್‌ಎಸ್ ಸರಣಿಯ ಉಪಗ್ರಹಗಳು ಸಕಾಲಿಕವಾಗಿ ಅಗತ್ಯ ಮಾಹಿತಿಗಳನ್ನು ರವಾನಿಸುವ ಮೂಲಕ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುತ್ತಿವೆ. ಕೃಷಿ, ಮಣ್ಣು, ಅರಣ್ಯ, ಸಾಗರ ಸಂಪನ್ಮೂಲ, ಭೂಮಿ ಮತ್ತು ಜಲಸಂಪನ್ಮೂಲ, ಖನಿಜಗಳನ್ನು ಹೊರತೆಗೆಯುವುದು, ಬಂಜರುಭೂಮಿ ಅಭಿವೃದ್ಧಿ, ಬರ ಮತ್ತು ಪ್ರವಾಹ ನಿರ್ವಹಣೆಯಂಥ ಕ್ಷೇತ್ರಗಳಿಗೆ ಅಗತ್ಯವಾದ ಮಾಹಿತಿಗಳನ್ನು ನಿಯತವಾಗಿ ನೀಡುತ್ತಿದೆ. ಇನ್ಸಾಟ್ ಉಪಗ್ರಹಗಳು ದೇಶದ ವಿಕೋಪ ನಿರ್ವಹಣೆ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಅದರಲ್ಲೂ ಮುಖ್ಯವಾಗಿ ಇನ್ಸಾಟ್ ಸರಣಿಯ ಉಪಗ್ರಹಗಳು ಸಂವಹನ ಕ್ರಾಂತಿಯಲ್ಲೇ ಮಾಡಿದ್ದು, ಪ್ರಸಾರ, ಶಿಕ್ಷಣ ಹಾಗೂ ವಿಕೋಪ ಪರಿಸ್ಥಿತಿ ಮುನ್ನೆಚ್ಚರಿಕೆ ಕ್ಷೇತ್ರಗಳಲ್ಲಿ ಬಳಕೆಯಾಗುತ್ತಿದೆ.

ದೂರಸಂವೇದಿ ಪ್ರಯತ್ನ ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ)ದಿಂದ 1970ರ ದಶಕದ ಆರಂಭದಲ್ಲೇ ನಡೆದಿತ್ತು. ವೈಮಾನಿಕ ಸಮೀಕ್ಷೆಯ ಮೂಲಕ ಪಡೆದ ಹಲವಾರು ಬಹುಮುಖಿ ಮಾಹಿತಿಗಳನ್ನು ತೆಗೆದುಕೊಂಡು, ಇನ್ಫ್ರಾರೆಡ್ ಸ್ಕ್ಯಾನರ್‌ಗಳು, ಬಹುವೀಕ್ಷಣೆಯ ಸ್ಕ್ಯಾನರ್, ರೇಡಿಯೋಮೀಟರ್‌ಗಳನ್ನು ಕಂಡುಹಿಡಿಯಲಾಯಿತು. ಇವುಗಳ ಮೂಲಕ ಮಣ್ಣು ಮತ್ತು ಭೂಬಳಕೆ ಅಧ್ಯಯನಗಳು ನಡೆದವು. ಜತೆಗೆ ವಿವಿಧ ಬೆಳೆಗಳನ್ನು ಹಾಗೂ ಬೆಳೆಗಳ ರೋಗಗಳ ಮೇಲೆ ನಿಗಾ ಇರಿಸಲು ಕೂಡಾ ಇದು ಸಹಕಾರಿಯಾಯಿತು. ಪ್ರಾಯೋಗಿಕವಾಗಿ ಉಡಾಯಿಸಿದ ದೂರಸಂವೇದಿ ಉಪಗ್ರಹಗಳಾದ ಭಾಸ್ಕರ–1 ಮತ್ತು ಭಾಸ್ಕರ–2 ಉಪಗ್ರಹಗಳು ಯಶಸ್ವಿಯಾದ ಹಿನ್ನೆಲೆಯಲ್ಲಿ ಇಸ್ರೊ ಹೊಸ ಕಾರ್ಯಾಚರಣೆ ಯುಗಕ್ಕೆ ಕಾಲಿಟ್ಟಿತು. ಈ ಮೂಲಕ ಅತ್ಯಾಧುನಿಕ ತಂತ್ರಜ್ಞಾನವನ್ನು ತಯಾರಿಸುವ ಮತ್ತು ಬಳಸುವ ಕಾರ್ಯಕ್ಕೆ ಮುಂದಾಯಿತು. ಭಾರತದ ದೂರಸಂವೇದಿ ಉಪಗ್ರಹಗಳಾದ ಐಆರೆಸ್–1ಎ 1988ರಲ್ಲಿ ಉಡಾವಣೆಯಾಯಿತು. ನಂತರ ಐಆರ್‌ಎಸ್–1ಬಿ 1991ರಲ್ಲಿ ಕಕ್ಷೆಗೆ ಸೇರಿತು. ಇವು ಇಂದು ದೇಶದ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕ್ಷೇತ್ರಕ್ಕೆ ಬಳಕೆಯಾಗುತ್ತಿವೆ.

ಬಹು ದೂರಸಂವೇದಿ ವ್ಯವಸ್ಥೆಯನ್ನು ದೈನಂದಿನ ಬಳಕೆಯಲ್ಲಿ ಎಕರೆವಾರು ಬೆಳೆಯ ಉತ್ಪಾದಕತೆ ಮತ್ತು ಇಳುವರಿ, ಗೋಧಿ, ಅಕ್ಕಿ, ನೆಲಗಡಲೆ, ಸೂರ್ಯಕಾಂತಿ, ಹತ್ತಿ, ರೇಷ್ಮೆ ಮತ್ತಿತರ ಬೆಳೆಗಳನ್ನು ರಾಷ್ಟ್ರಮಟ್ಟದಲ್ಲಿ ಅಂದಾಜು ಮಾಡಲು ಕೂಡಾ ಇದು ಸಹಕಾರಿಯಾಗಿದೆ. ಬೆಳೆಗಳಿಗೆ ಎದುರಾಗುವ ರೋಗ ಮತ್ತು ಕೀಟಬಾಧೆಗಳನ್ನು ತಿಳಿದುಕೊಳ್ಳಲು ದೂರಸಂವೇದಿ ತಂತ್ರಜ್ಞಾನದ ಮೂಲಕ ಪಡೆದ ಮಾಹಿತಿಗಳನ್ನು ವಿಶ್ಲೇಷಿಸಿಕೊಳ್ಳುವ ವ್ಯವಸ್ಥೆಯೂ ನಮ್ಮಲ್ಲಿದೆ. ಜತೆಗೆ ಬೆಳೆ ಒತ್ತಡ ಪರಿಸ್ಥಿತಿಯ ಅಧ್ಯಯನಕ್ಕೂ ಇದು



Universal Coaching Centre
www.shikarat.com

ಸಹಕಾರಿಯಾಗಿದೆ. ಜಿಲ್ಲಾಮಟ್ಟದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಬರ ಮೌಲ್ಯಮಾಪನಾ ಹೊತ್ತಿಗೆ ತಯಾರಿಸಲು ಉಪಗ್ರಹಗಳಿಂದ ಪಡೆದ ಮಾಹಿತಿ, ಅಂಕಿ ಅಂಶ ಮತ್ತು ಚಿತ್ರಗಳನ್ನು ಬಳಸಿಕೊಳ್ಳಲಾಗುತ್ತಿದೆ. ದೇಶದ ಹನ್ನೆರಡು ರಾಜ್ಯಗಳಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದ್ದು, ಇಂಥ ಮಾಹಿತಿ ಪುಸ್ತಕ ಬಿಡುಗಡೆ ಮಾಡುವ ಮೂಲಕ ಜಿಲ್ಲಾ ಮಟ್ಟದ ಅಧಿಕಾರಿಗಳು ಕೃಷಿ ಸಂಪನ್ಮೂಲ ಯೋಜನಾಗಾರರು, ಕೃಷಿಗೆ ಎದುರಾಗಬಹುದಾದ ಬರ ಪರಿಸ್ಥಿತಿ, ಅದರ ತೀವ್ರತೆಯ ಪ್ರಮಾಣ ಮತ್ತು ಅದನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಅನುಕೂಲವಾಗುವ ಅಂಶಗಳನ್ನು ಇದು ಒಳಗೊಂಡಿದೆ. ಭೂ ಬಳಕೆ ಹಾಗೂ ಭೂ ಬಳಕೆ ನಕ್ಷೆ, ಕೃಷಿಗೆ ಅನುಕೂಲಕರ ವಾತಾವರಣ ಮತ್ತು ಪ್ರಾದೇಶಿಕ ಯೋಜನಾ ವ್ಯವಸ್ಥೆಯನ್ನು ದೇಶಾದ್ಯಂತ ಕೈಗೊಳ್ಳಲು ಇದು ನೆರವಾಗಿದೆ.

ದೂರಸಂವೇದಿ ಮಾಹಿತಿಯನ್ನು ಆಧರಿಸಿ ಅರಣ್ಯ ನಕ್ಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಅರಣ್ಯಸುರಕ್ಷೆ ಬಗ್ಗೆ ನಿಗಾ ವಹಿಸಲು, ತ್ಯಾಜ್ಯದ ಪ್ರಮಾಣವನ್ನು ವಾಸ್ತವವಾಗಿ ಅಂದಾಜು ಮಾಡಲು ನಡೆಸುವ ಮೌಲ್ಯಮಾಪನವನ್ನು ತೀರಾ ಸಣ್ಣ ಹಂತದಲ್ಲೂ ಮಾಡಬಹುದಾಗಿದೆ. ದೇಶಾದ್ಯಂತ ಇರುವ ಬಂಜರುಭೂಮಿಯನ್ನು ಉಪಗ್ರಹ ಚಿತ್ರಗಳ ಸಹಕಾರದಿಂದ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಗ್ರಾಮಮಟ್ಟದಲ್ಲಿ 13 ಬಗೆಯ ವಿಭಿನ್ನ ಬಂಜರುಭೂಮಿ ಅಭಿವೃದ್ಧಿ ಯೋಜನೆಗಳಿಗೂ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ದೇಶದಲ್ಲಿ ಸುಮಾರು 25 ದಶಲಕ್ಷ ಹೆಕ್ಟೇರ್ ಬಂಜರುಭೂಮಿ ಇದ್ದು, ಇದರ ಶೇಕಡ 50ನ್ನು ಬಳಸಿಕೊಳ್ಳಲು ಅವಕಾಶವಿದೆ. ಸೂಕ್ತ ಕೃಷಿ ಪದ್ಧತಿಗಳ ಮೂಲಕ ಉತ್ಪಾದಕತೆಯನ್ನು ಹೆಚ್ಚಿಸುವ ಪ್ರಯತ್ನವೂ ನಡೆದಿದ್ದು, ಬಂಜರುಭೂಮಿಗೆ ಹೆಚ್ಚಿನ ಮಹತ್ವ ಇದೆ.

ರಾಷ್ಟ್ರೀಯ ಕುಡಿತುವ ನೀರು ಯೋಜನೆಯಡಿ, ಹೈಡ್ರೊ ಜೀಯೊ ಮೆಟೊಪೊಲಾಜಿಕಲ್ ನಕ್ಷೆಗಳನ್ನು ಇಡೀ ದೇಶಕ್ಕೇ ತೆಗೆಯಲಾಗಿದ್ದು, ಉಪಗ್ರಹ ತಂತ್ರಜ್ಞಾನದಿಂದ ಈ ಕಾರ್ಯ ಹಗುರವಾಗಿದೆ. ಇದು ದೇಶದ 447 ಜಿಲ್ಲೆಗಳನ್ನು ಒಳಗೊಳ್ಳುತ್ತದೆ. ಉಪಗ್ರಹ ಮಾಹಿತಿಯಂತೆ ಎರಡು ಲಕ್ಷ ಬಾವಿಗಳಿವೆ. ಬಾಹ್ಯಾಕಾಶ ದೂರಸಂವೇದಿಕೆ ವ್ಯವಸ್ಥೆಯು ಶೇಕಡ 92ರಷ್ಟು ಅಂತರ್ಜಲ ಬಳಕೆ ಪ್ರಮಾಣವನ್ನು ಅಂದಾಜು ಮಾಡಲಾಗುತ್ತದೆ. ಸಾಂಪ್ರದಾಯಿಕ ಪದ್ಧತಿಯಲ್ಲಿ ಶೇಕಡ 46 ಗುರಿಯನ್ನಷ್ಟೇ ಸಾಧಿಸಲಾಗಿತ್ತು. ಬೆಳವಣಿಗೆ ಹೆಚ್ಚಿಸುವಲ್ಲಿ, ಹಿಮಾಲಯದ ಸುತ್ತ ಸಂಗ್ರಹವಿರುವ ಮಂಜುಗಡ್ಡೆ ಭಾರಿ ಪ್ರಮಾಣದಲ್ಲಿ ಕರಗುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಹತ್ವದ ಹೆಜ್ಜೆ ಎನಿಸಿದೆ. ಪ್ರವಾಹ ಪರಿಸ್ಥಿತಿ ಬಗ್ಗೆ ನಿಖರವಾದ ಮಾಹಿತಿಯನ್ನು ನೀಡಲು ಅವಕಾಶವಿದ್ದು, ಇದು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಸಹಾಯಕವಾಗಲಿದೆ. ನದಿ ಹರಿವು ತಿರುಗಿಸಿದ ಪ್ರಕರಣಗಳು, ಅಡೆ ಅಣೆಗಳು ಮತ್ತು ಒಡ್ಡುಗಳ ನಿರ್ಮಾಣದಂಥ ಜಲಾನಯನ ಕಾರ್ಯಕ್ರಮಗಳನ್ನು ಕೂಡಾ ಮುಂದುವರಿಸಬಹುದಾಗಿದೆ.

ಸಂಭಾವ್ಯ ಪ್ರವಾಹದ ಅಪಾಯದ ಬಗ್ಗೆ ಹೆಚ್ಚಿನ ಒತ್ತು ನೀಡಲಾಗಿದೆ. ಮುಂದಿನ ದಶಕಗಳಲ್ಲಿ ಈ ಮೂಲಕ ಪ್ರವಾಹ ನಿಯಂತ್ರಣ ಸಾಧಿಸಲು ಅನುವಾಗಲಿದೆ.

ಭಾರತದ ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾ, ಖನಿಜ ಸಂಪನ್ಮೂಲ ಅಂದಾಜು ಮಾಡಲು ವಸುಂಧರ ಹೆಸರಿನ ಹೊಸ ಯೋಜನೆಯನ್ನು ದಕ್ಷಿಣಭಾಗದ ನಾಲ್ಕು ಲಕ್ಷ ಕಿಲೋಮೀಟರ್ ವ್ಯಾಪ್ತಿಯಲ್ಲಿ ಜಾರಿಗೊಳಿಸಲಾಗಿದೆ. ಇದು ಪ್ರಾಚೀನದಿಂದ ಹಿಡಿದು ತೀರಾ ಇತ್ತೀಚಿನವರೆಗಿನ ಭೌಗೋಳಿಕ ಲಕ್ಷಣಗಳನ್ನು ಒಳಗೊಳ್ಳುತ್ತದೆ. ಮುಖ್ಯವಾಗಿ ಶಿಲಾಪದರ, ಗ್ರಾನೈಟ್– ಹಸಿರುಶಿಲೆ ಮತ್ತು ಪ್ರೊಟೊಜೆನಿಕ್ ವಲಯವನ್ನು ಗುರುತಿಸುತ್ತದೆ. ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದ್ದು, ಇದರಿಂದ ಡಿಜಿಟಲ್ ಮಾಹಿತಿ ಮತ್ತು ಭೌಗೋಳಿಕ ಅಂಕಿ ಅಂಶಗಳ ಮಾದರಿಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿದೆ. ಈ ಯೋಜನೆಯ ಪರಿಣಾಮ ಆಶಾದಾಯಕವಾಗಿದ್ದು, ಇದು ಹೊಸ ಖನಿಜಸಂಪತ್ತಿನ ವಲಯಗಳನ್ನು ಗುರುತಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ಯೋಜನೆಯಡಿ ಉತ್ತರ ಭಾರತದ ಭಾಗಗಳನ್ನು ಸೇರಿಸುವ ಪ್ರಯತ್ನವೂ ನಡೆದಿದ್ದು, ಖನಿಜ ಸಂಪತ್ತಿನ ಶೋಧನೆಗೆ ಬಾಹ್ಯಾಕಾಶ ಮಾಹಿತಿಗಳನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಇವೆಲ್ಲಕ್ಕೂ ಉಪಗ್ರಹ ಮಾಹಿತಿಯನ್ನೇ ಡಿಜಿಟಲ್ ವಿಶ್ಲೇಷಣೆಗೆ ಒಳಪಡಿಸಿ ಬಳಸಿಕೊಳ್ಳಲಾಗುತ್ತದೆ. ಭಾರತದ ಪ್ರಮುಖ ನಗರಗಳ ಭೂಬಳಕೆ ಮತ್ತು ನಗರಾಭಿವೃದ್ಧಿ ನಕ್ಷೆಗಳನ್ನು ಸಿದ್ಧಪಡಿಸಲಾಗಿದೆ. ಕೈಗಾರಿಕೆಗಳಿಗೆ ಅತ್ಯಂತ ಸಮರ್ಪಕವಾದ ಸ್ಥಳನಿಗದಿಗೆ ಈ ಮಾಹಿತಿಗಳನ್ನು ಬಳಸಿಕೊಳ್ಳಲಾಗುತ್ತಿದೆ. ಮುಂಬೈ ಮತ್ತು ನವದೆಹಲಿಯಂಥ ಮೆಟ್ರೊ ನಗರಗಳಲ್ಲಿ ಗೃಹನಿರ್ಮಾಣ ಮತ್ತು ಇತರ ಮೂಲಸೌಕರ್ಯ ವ್ಯವಸ್ಥೆಗಳನ್ನು ಕಲ್ಪಿಸಲು ಉಪಗ್ರಹ ಚಿತ್ರಗಳನ್ನೇ ಆಧಾರವಾಗಿ ಉಪಯೋಗಿಸಲಾಗುತ್ತಿದೆ. ಉಪಗ್ರಹ ಆಧರಿತ ದೂರಸಂವೇದಿ ವ್ಯವಸ್ಥೆಯನ್ನು ನಗರ ಯೋಜನೆಗೆ ಕೂಡಾ ಬಳಸಿಕೊಳ್ಳಲಾಗುತ್ತಿದೆ. ಇತೀಚೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಲು ಉದ್ದೇಶಿಸಿರುವ ವರ್ತುಲರಸ್ತೆ ಕಾಮಗಾರಿಗೆ ಇದನ್ನೇ ಮೂಲವಾಗಿ ಉಪಯೋಗಿಸಿಕೊಳ್ಳಲಾಗಿದೆ.

ಇಂಥ ಉಪಗ್ರಹ ಚಿತ್ರಗಳನ್ನು ಕರಾವಳಿ ನಕ್ಷೆ ಸಿದ್ಧಪಡಿಸಲು ಕೂಡಾ ಬಳಸಿಕೊಳ್ಳಲಾಗುತ್ತಿದೆ. ದೇಶದ ಸಂಪೂರ್ಣ ಕರಾವಳಿ ತೀರವನ್ನು 1: 2,50,000 ಅನುಪಾತದ ಸ್ಕೇಲ್‌ನಲ್ಲಿ ನಿಖರವಾಗಿ ಗುರುತಿಸುವುದು ಇದರಿಂದ ಸಾಧ್ಯವಾಗಲಿದೆ. ಇದರಿಂದ ಹಿನ್ನೀರಿನ ಗುರುತಿಸುವಿಕೆ ಮತ್ತು ಮೀನುಗಾರಿಕೆಗೆ ಅಗತ್ಯವಾದ ಕೆರೆ, ಹೊಂಡಗಳನ್ನು ಗುರುತಿಸಲು ಕೂಡಾ ಸಹಕಾರಿಯಾಗಲಿದೆ. ದೇಶದ ಒಟ್ಟು ಜನಸಂಖ್ಯೆಯ ಶೇಕಡ 15ರಷ್ಟು ಪಾಲು ಮತ್ತು ಏಳು ಸಾವಿರ ಕಿಲೋಮೀಟರ್‌ಗೂ ಹೆಚ್ಚು ಉದ್ದದ ಕರಾವಳಿ ತೀರವನ್ನು ಹೊಂದಿರುವ ಭಾರತದಂಥ ದೇಶದಲ್ಲಿ ಮೀನುಗಾರಿಕೆ ಇನ್ನೂ ವರ್ಷಕ್ಕೆ 20 ಲಕ್ಷ ಟನ್ ಮಾತ್ರ ಇದೆ. ಅಂದರೆ ಇದು ಇಡೀ ವಿಶ್ವದಲ್ಲಿ ನಡೆಯುವ ಮೀನುಗಾರಿಕೆಯ ಶೇಕಡ ಎರಡಷ್ಟು ಮಾತ್ರ. ಉಪಗ್ರಹ ಮಾಹಿತಿಯನ್ನು ಆಧರಿಸಿ, ಮತ್ಸ್ಯ ಸಂಪನ್ಮೂಲ ಹೆಚ್ಚಾಗಿ ಇರುವ ಕ್ಷೇತ್ರವನ್ನು ಗುರುತಿಸಬಹುದಾಗಿದೆ. ಇದರ ಜತೆಗೆ ಸಾಗರ ಉಷ್ಣತೆಯ ಹಂಚಿಕೆಯನ್ನು ಕೂಡಾ ಸಮರ್ಪಕವಾಗಿ ತಿಳಿದುಕೊಳ್ಳಲು ಈ ವ್ಯವಸ್ಥೆ ಸಹಕಾರಿಯಾಗಿದೆ. ಮತ್ಸ್ಯಶಾಲೆ ಕಾರ್ಯಕ್ರಮದಡಿಯಲ್ಲಿ ಮೀನುಗಾರಿಕೆಗೆ ಸಂಬಂಧಿಸಿದ ಮುನ್ಸೂಚನೆಗಳನ್ನು ಆಕಾಶವಾಣಿ ನೀಡುತ್ತಿದ್ದು, ಇದರಿಂದ ಕರಾವಳಿ ಭಾಗದ ಮೀನುಗಾರರು ಹೆಚ್ಚಿನ ಮೀನುಗಾರಿಕೆಯನ್ನು ಸುಸ್ಥಿರವಾಗಿ ಕೈಗೊಳ್ಳಲು ನೆರವಾಗಲಿದೆ.

ಉಪಗ್ರಹ ಆಧರಿತ ದೂರಸಂವೇದಿ ವ್ಯವಸ್ಥೆಯು ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸೂಕ್ಷ್ಮಹಂತದಲ್ಲೂ ಕೈಗೊಳ್ಳಲು ಅತ್ಯಂತ ಪ್ರಭಾವಿ ಸಾಧನವಾಗಿ ಮಾರ್ಪಟ್ಟಿದೆ. ಇದು ಮಾತ್ರ ದೇಶದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಸಹಕಾರಿಯಾಗಬಲ್ಲದು. ದೂರಸಂವೇದಿ ತಂತ್ರಜ್ಞಾನ ಆಧರಿತ ಮಾಹಿತಿಯನ್ನು ಬಳಸಿಕೊಂಡು ಸಂಪನ್ಮೂಲ ನಕ್ಷೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.


www.shikarat.com

ಉದಾಹರಣೆಗೆ ಜಲಸಂಪನ್ಮೂಲವನ್ನು ತೆಗೆದುಕೊಂಡರೆ, ಜಲಮಟ್ಟವನ್ನು ಅಳೆಯಲು, ಅಂತರ್ಜಲಮಟ್ಟ ಕಡಿಮೆ ಇರುವ ಪ್ರದೇಶಗಳನ್ನು ಗುರುತಿಸಲು, ಅಂತರ್ಜಲ ಮರುಪೂರಣ ಅಗತ್ಯವಿರುವ ಪ್ರದೇಶಗಳನ್ನು ಗುರುತಿಸಲು, ಭೂಮಿ ಕ್ಷಾರೀಯ ಗುಣವನ್ನು ಹೊಂದಿದೆಯೇ ಅಥವಾ ಆಮ್ಲೀಯ ಗುಣವನ್ನು ಹೊಂದಿದೆಯೇ ಎನ್ನುವುದನ್ನು ತಿಳಿದುಕೊಳ್ಳಲು, ಮಣ್ಣಿನ ಸವಕಳಿ ಪ್ರಮಾಣವನ್ನು ಅಂದಾಜು ಮಾಡಲು, ಹಾಳಿ ಇರುವ ಭೂಬಳಕೆ ಮತ್ತು ಬಂಜರುಭೂಮಿ ಹಂಚಿಕೆಯ ಪ್ರಮಾಣವನ್ನು ತಿಳಿದುಕೊಳ್ಳಲು ಕೂಡಾ ಇದು ಅತ್ಯಂತ ಪ್ರಭಾವಿ ವಿಧಾನವಾಗಿ ಬಳಕೆಯಾಗಲಿದೆ. ಉಪಗ್ರಹ ಆಧರಿತ ಮಾಹಿತಿಯನ್ನು ಹವಾಮಾನ ಮುನ್ಸೂಚನೆ ಅಂಕಿ ಅಂಶಗಳ ಜತೆ ಹಾಗೂ ಸಾಮಾಜಿಕ– ಆರ್ಥಿಕ ಅಂಕಿ ಅಂಶಗಳ ಜತೆ ಸೇರಿಸಿಕೊಂಡು, ಸಮಗ್ರ ಭೂಮಿ ಹಾಗೂ ಜಲ ಸಂಪನ್ಮೂಲ ನಕ್ಷೆಯನ್ನು ತೀರಾ ಸೂಕ್ಷ್ಮ ಹಂತದಲ್ಲಿ ಕೂಡಾ ತಯಾರಿಸಲು ಇದು ಅವಕಾಶ ಕಲ್ಪಿಸಲಿದೆ. ಈ ಮೂಲಕ ಕೃಷಿ ಆದ್ಯತಾ ವಲಯಗಳನ್ನು ಗುರುತಿಸಿ ಅಭಿವೃದ್ಧಿಪಡಿಸುವುದು ಸಾಧ್ಯವಾಗಲಿದೆ. ಇದರ ಜತೆಗೆ ಜೈವಿಕ ಇಂಧನ ಮತ್ತು ಮೇವು ಅಭಿವೃದ್ಧಿ, ಮಣ್ಣು ಸಂರಕ್ಷಣೆ ಮತ್ತು ಅರಣ್ಯೀಕರಣ ಯೋಜನೆಗಳನ್ನು ಸ್ಥಳೀಯ ಸಮಸ್ಯೆಗಳ ನಿವಾರಣೆ ನಿಟ್ಟಿನಲ್ಲಿ ಪ್ಯಾಕೇಜ್ ರೂಪದಲ್ಲಿ ಬಳಸಿಕೊಳ್ಳಲು ಅವಕಾಶವಾಗಲಿದೆ. ಇದರ ಮೂಲಕ ಗ್ರಾಮಮಟ್ಟದ ಅಥವಾ ತಾಲೂಕು ಮಟ್ಟದ ಮಾಹಿತಿಗಳನ್ನು ಸಂಗ್ರಹಿಸಿ ಆ ಹಂತದ ಯೋಜನೆಗಳನ್ನು ಜಾರಿಗೊಳಿಸಲು ಕೂಡಾ ಇದು ಪೂರಕವಾಗಲಿದೆ.

ಮೊದಲ ಪೀಳಿಗೆಯ ಇನ್ಸಾಟ್ 1ಬಿಯನ್ನು ಯಶಸ್ವಿಯಾಗಿ ಉಡಾಯಿಸಲು ಸಾಧ್ಯವಾಗಿರುವ ಹಿನ್ನೆಲೆಯಲ್ಲಿ, ದೇಶದ ದೂರಸಂಪರ್ಕ ಕ್ಷೇತ್ರದಲ್ಲಿ ಹಿಂದೆಂದೂ ಕಂಡು ಕೇಳರಿಯದ ಕ್ರಾಂತಿಕಾರಿ ಬದಲಾವಣೆಗಳು ಸಾಧ್ಯವಾಗಿವೆ. ಇನ್ಸಾಟ್ ಸರಣಿಯ ಉಪಗ್ರಹಗಳು ವಿಶಿಷ್ಟ ಹಾಗೂ ಬಹುಮುಖಿ ಕಾರ್ಯಗಳನ್ನು ನಿರ್ವಹಿಸಬಹುದಾದ ಉಪಗ್ರಹ ವ್ಯವಸ್ಥೆಯಾಗಿದ್ದು, ಇದು ಬಹುಮುಖಿ ಸೇವೆಗಳನ್ನು ಒಳಗೊಂಡಿದೆ. ಈ ಪೈಕಿ ಅತಿದೂರದ ಪ್ರದೇಶಗಳಿಗೆ ದೂರಸಂಪರ್ಕ ವ್ಯವಸ್ಥೆ ಕಲ್ಪಿಸುವುದು, ದೇಶವ್ಯಾಪ್ತಿಯ ಟಿವಿ ಮತ್ತು ರೇಡಿಯೊ ಪ್ರಸಾರ, ಭೌತಿಕ ಚಿತ್ರಗ್ರಹಣ, ಮಾಹಿತಿ ರವಾನೆ, ವಿಕೋಪದ ಬಗ್ಗೆ ಎಚ್ಚರಿಕೆಯಂಥ ಹತ್ತುಹಲವು ಕ್ಷೇತ್ರಗಳಲ್ಲಿ ಇದರ ಬಳಕೆ ಸಾಧ್ಯವಾಗಿದೆ. ಇಡೀ ದೇಶಕ್ಕೆ ನಿರಂತರ ಸಂಪರ್ಕ ಸೇವೆಯು 1990ರಲ್ಲಿ ಉಡಾಯಿಸಿದ ಇನ್ಸಾಟ್ 1ಡಿ ಉಪಗ್ರಹದಿಂದಾಗಿ ಸಾಧ್ಯವಾಗಿದೆ. ನಂತರ 1992ರಲ್ಲಿ ಉಡಾಯಿಸಿದ ಇನ್ಸಾಟ್ 2ಎ ಮತ್ತು 1993ರಲ್ಲಿ ಉಡಾಯಿಸಿದ ಇನ್ಸಾಟ್– 2ಬಿ ಈ ನಿಟ್ಟಿನಲ್ಲಿ ಕ್ರಾಂತಿಕಾರಿ ಬದಲಾವಣೆಗಳಿಗೆ ಕಾರಣವಾಗಿದೆ.

ಇನ್ಸಾಟ್ ವ್ಯವಸ್ಥೆಯು ಇಂದಿನವರೆಗೆ 5000ಕ್ಕೂ ಹೆಚ್ಚು ದ್ವಿಮುಖ ಸಂವಹನ ಜಾಲಗಳನ್ನು ಒಳಗೊಂಡಿದ್ದು, ಇದರಿಂದ ಮೊಟ್ಟಮೊದಲ ಬಾರಿಗೆ ದೇಶದ 140 ಮಾರ್ಗಗಳನ್ನು ದೇಶವ್ಯಾಪಿಯಾಗಿ ಸಂಪರ್ಕಿಸಲು ಸಾಧ್ಯವಾಗಿದೆ. ತೀರಾ ದುರ್ಗಮ ಹಾಗೂ ಗುಡ್ಡಗಾಡು ಪ್ರದೇಶಗಳು, ದ್ವೀಪಪ್ರದೇಶಗಳು ಕೂಡಾ ದೇಶದ ಮುಖ್ಯವಾಹಿನಿ ಜತೆ ಸಂಪರ್ಕ ಸಾಧಿಸಲು ಇದು ಬಹಳಷ್ಟು ಪ್ರಯೋಜನಕಾರಿಯಾಗಿದೆ. ದೇಶವ್ಯಾಪಿ ಭೌಗೋಳಿಕ ಸಂಶೋಧನೆಗೆ ಕೂಡಾ ಇನ್ಸಾಟ್ ಬಳಕೆಯಾಗುತ್ತಿದೆ. ಇದರ ಜತೆಗೆ ಈ ವ್ಯವಸ್ಥೆಯ ಪ್ರಯೋಜನ ಆಡಳಿತ, ವ್ಯಾಪಾರ, ಕಂಪ್ಯೂಟರ್ ಸಂವಹನಕ್ಕೂ ಇದು ಬಳಕೆಯಾಗುತ್ತಿದೆ. ಇದಕ್ಕಾಗಿಯೇ 23 ವಿಶೇಷ ಜಾಲಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸಣ್ಣ ಟರ್ಮಿನಲ್‌ಗಳ ಮೂಲಕ ಇದು ಕಾರ್ಯ ನಿರ್ವಹಿಸುತ್ತದೆ. ದೇಶದಲ್ಲಿ ಸುದ್ದಿಸಂಪರ್ಕ ಜಾಲಗಳಾದ ಪಿಟಿಐನಂಥ ಸಂಸ್ಥೆಗಳು ಫೇಸಿಮೈಸ್ ವರ್ಗಾವಣೆ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತಿವೆ. ಈ ಮೂಲಕ ವಿನ್ಯಾಸಗೊಳಿಸಲಾದ ಇಡೀ ಪುಟವನ್ನು ದಕ್ಷಿಣದ ಚೆನ್ನೈನಿಂದ ಉತ್ತದ ದೆಹಲಿಯಲ್ಲಿ ಮುದ್ರಿಸಲು ಇದು ಸಾಧ್ಯವಾಗಲಿದೆ. ಇದರ ಜತೆಗೆ ಯಾವುದೇ ವಿಕೋಪಗಳು ಸಂಭವಿಸಿದ ಸಂದರ್ಭದಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಅಗತ್ಯವಾದ ತುರ್ತು ಸಂವಹನಾ ವ್ಯವಸ್ಥೆಗೂ ಇದು ಪೂರಕವಾಗಲಿದೆ. ಅತ್ಯಂತ ವಿನೂತನ ಮತ್ತು ಪ್ರಾಯೋಗಿಕವಾದ ಗ್ರಾಮೀಣ ಟೆಲಿಗ್ರಫಿ ಜಲವನ್ನು ಈಶಾನ್ಯ ರಾಜ್ಯಗಳ ಗುಡ್ಡಪ್ರದೇಶಗಳಲ್ಲಿ ಅಭಿವೃದ್ಧಿಪಡಿಸಲು ಕೂಡಾ ಉದ್ದೇಶಿಸಲಾಗಿದೆ. ಶಿಲ್ಲಾಂಗ್ ಮತ್ತು 50ಕ್ಕೂ ಹೆಚ್ಚು ಗ್ರಾಮೀಣ ಟೆಲಿಗ್ರಾಫಿಕ್ ಟರ್ಮಿನಲ್‌ಗಳನ್ನು ಈಗಾಗಲೇ ವ್ಯವಸ್ಥೆ ಮಾಡಲಾಗಿದ್ದು, ಹೊಸ ವ್ಯವಸ್ಥೆಯ ಫಲಿತಾಂಶ ಭರವಸೆದಾಯಕವಾಗಿದೆ. ಇನ್ಸಾಟ್‌ಗಳನ್ನು ಬಳಸಿಕೊಂಡು ರಾಷ್ಟ್ರೀಯ ಮಾಹಿತಿ ಕೇಂದ್ರ ಜಾಲವನ್ನು ಮತ್ತು ಸ್ಪೆಕ್ಟ್ರಂ ತಂತ್ರ ವ್ಯವಸ್ಥೆಯನ್ನು ಬಳಸಿಕೊಂಡು ಮಾಹಿತಿ ವರ್ಗಾವಣೆ ಮಾಡಲಾಗುತ್ತಿದೆ. ಈ ವ್ಯವಸ್ಥೆಯಡಿ ಎಲ್ಲ ರಾಜ್ಯ ಸರ್ಕಾರಗಳ ರಾಜಧಾನಿಗಳು, ಜಿಲ್ಲಾಕೇಂದ್ರಗಳು ಮತ್ತು ಕೇಂದ್ರ ಸರ್ಕಾರದ ಇಲಾಖೆಗಳ ನಡುವೆ ಸಂಪರ್ಕ ಜಾಲ ರೂಪಿಸುವುದು ಸಾಧ್ಯವಾಗಿದೆ. ಇದಕ್ಕಾಗಿಯೇ 450 ಮೈಕ್ರೊ ಟರ್ಮಿನಲ್‌ಗಳು ದೇಶಾದ್ಯಂತ ನಿರ್ಮಾಣವಾಗಿದ್ದು, ಇದು ಮಾಹಿತಿ ವರ್ಗಾವಣೆ, ಮೌಲ್ಯಮಾಪನ, ಮೇಲ್ವಿಚಾರಣೆ ಹೀಗೆ ವಿವಿಧ ಕೆಲಸ ಕಾರ್ಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತಂದಿದೆ. ರಿಮೋಟ್ ಏರಿಯಾ ಬ್ಯುಸಿನೆಸ್ ಮತ್ತು ಮೆಸೇಜ್ ನೆಟ್‌ವರ್ಕ್ ಮತ್ತು ವಿ–ಸ್ಯಾಟ್ ತಂತ್ರಜ್ಞಾನ ಬಳಸಿಕೊಂಡು ರಾಷ್ಟ್ರೀಯ ಮಾಹಿತಿ ಕೇಂದ್ರದ ಮಾದರಿಯಲ್ಲೇ ತೀರಾ ಗುಡ್ಡಗಾಡು ಪ್ರದೇಶಗಳ ಜತೆ ಸಂಪರ್ಕ ಸಾಧಿಸುವ ಹೊಸ ಯೋಜನೆಯೂ ಜಾರಿ ಹಂತದಲ್ಲಿದೆ.

ಇನ್ಸಾಟ್ ಉಪಗ್ರಹದಿಂದ ಪ್ರತಿ ಅರ್ಧ ಗಂಟೆಗೊಮ್ಮೆ ಹವಾಮಾನಕ್ಕೆ ಸಂಬಂಧಿಸಿದ ಚಿತ್ರಗಳನ್ನು ಪಡೆಯಲಾಗುತ್ತಿದ್ದು, ಬಿರುಗಾಳಿ, ಚಂಡಮಾರುತದಂಥ ಸಂದರ್ಭದಲ್ಲಿ ನಿರಂತರವಾಗಿ ಇಂಥ ಚಿತ್ರಗಳನ್ನು ಪಡೆದು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅದನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ. ಇದುವರೆಗೂ ತಲುಪಲು ಸಾಧ್ಯವಾಗದ 100ಕ್ಕೂ ಹೆಚ್ಚು ಗುಡ್ಡಗಾಡು ಪ್ರದೇಶಗಳ ಹವಾಮಾನ ಸಂಬಂಧಿ ಮಾಹಿತಿಗಳನ್ನು ಕೂಡಾ ಕ್ಷಣಾರ್ಧದಲ್ಲೇ ಅವರಿಗೆ ತಲುಪಿಸಲು ಇದರಿಂದ ಸಾಧ್ಯವಾಗಿದೆ. ಇದರಲ್ಲಿ ಅಂಟಾರ್ಟಿಕಾದ ದಕ್ಷಿಣ ಗಂಗೋತ್ರಿಯೂ ಸೇರಿದೆ. ಇದರ ಕಾರಣದಿಂದಾಗಿ ಹವಾಮಾನ ಸಂಬಂಧ ಮಾಹಿತಿ ಮತ್ತು ಮುನ್ಸೂಚನೆಯನ್ನು ಯಾವುದೇ ತಡವಿಲ್ಲದೇ ಪಡೆಯಲು ಸಹಕಾರಿಯಾಗಿದೆ. ಹವಾಮಾನ ಮುನ್ಸೂಚನೆ, ಮೇಲ್ಮುಖ ಗಾಳಿಯ ಚಲನೆ, ಸಮುದ್ರದ ಮೇಲ್ಮೈ ಉಷ್ಣಾಂಶ, ಮೋಡದ ತುದಿಯ ಉಷ್ಣತೆ ಮತ್ತು ಘನೀಕರಣ ಸೂಚ್ಯಂಕದ ಬಗೆಗಿನ ಮಾಹಿತಿಯನ್ನು ಕೂಡಾ ಪಡೆಯಬಹುದಾಗಿದೆ. ಈ ಇಡೀ ಪ್ರದೇಶದಲ್ಲಿ ಹವಾಮಾನಕ್ಕೆ ಸಂಬಂಧಿಸಿದ ಚಿತ್ರಗಳನ್ನು ಕಳುಹಿಸುವ ಏಕೈಕ ಜಿಯೋಸ್ಟೇಷನರಿ ಉಪಗ್ರಹ ಇದಾಗಿದ್ದು, ಇದು ಕೇವಲ ನಮ್ಮ ದಏಶಕ್ಕೆ ಮಾತ್ರವಲ್ಲದೇ ಇಡೀ ವಿಶ್ವಕ್ಕೆ ಇದರ ಪ್ರಯೋಜನವಾಗುತ್ತಿದೆ. ಪ್ರತಿದಿನ ಮುಂಜಾನೆ 6 ಗಂಟೆಗೆ ಗಾಳಿಚಲನೆ ಕುರಿತ ವಿಎಚ್‌ಆರ್‌ಆರ್ ಚಿತ್ರಗಳನ್ನು ವಿಶ್ವ ಹವಾಮಾನ ಸಂಸ್ಥೆಯ ಜಾಗತಿಕ ದೂರಸಂಪರ್ಕ ವ್ಯವಸ್ಥೆಗೆ ಅಪ್‌ಲೋಡ್ ಮಾಡಲಾಗುತ್ತಿದೆ. ಪ್ರತಿದಿನ 8 ಗಂಟೆಗೆ



www.shikarat.com

ಪೂರ್ಣ ಡಿಸ್ಕ್ ಐಆರ್ ಚಿತ್ರಗಳನ್ನು ವರ್ಗಾಯಿಸಲಾಗುತ್ತಿದೆ. ಇದನ್ನು ರೇಡಿಯೊ ಫೆಸಿಮೈಲ್ ಪ್ರಸಾರ ಮೂಲಕ ಎಲ್ಲ ನೆರೆಯ ದೇಶಗಳಿಗೂ ನೀಡಲಾಗುತ್ತದೆ.

ಇನ್ಸಾಟ್ ಉಪಗ್ರಹವನ್ನು ವಿನೂತನವಗಿ ಬಳಸಿಕೊಳ್ಳುವ ಪ್ರಯತ್ನ ನಿರಂತರವಾಗಿ ಮುಂದುವರಿದಿದ್ದು, ಶೀಘ್ರವಾಗಿ ಮಾಹಿತಿ ತಲುಪಿಸಲು ಸಾಧ್ಯವಾಗದ ಗುಡ್ಡಗಾಡು ಪ್ರದೇಶಕ್ಕೆ ನಿರ್ದಿಷ್ಟವಾಗಿ ಸ್ಥಳೀಯ ವಿಕೋಪ ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಯೋಜನೆ ಇದೀಗ  ಜಾರಿಗೆ ಬಂದಿದೆ. ಇದರಲ್ಲಿ 100 ವಿಕೋಪ ಮುನ್ನೆಚ್ಚರಿಕೆ ರಿಸೀವರ್‌ಗಳನ್ನು ಅಳವಡಿಸಲಾಗುತ್ತಿದೆ. ಪೂರ್ವ ಕರಾವಳಿಯ ಚಂಡಮಾರುತಪೀಡಿತ ಪ್ರದೇಶಗಳಿಗೆ ಇದು ವರದಾನವಾಗಲಿದೆ. ಇಂಥ ವಿಕೋಪ ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಅಳವಡಿಸಿರುವುದರಿಂದ 1987ರಲ್ಲಿ ಇಂಥ ಮೊದಲ ಮುನ್ನೆಚ್ಚರಿಕೆ ಮಾಹಿತಿಯನ್ನು ರವಾನಿಸುವುದು ಸಾಧ್ಯವಾಯಿತು. ಇದೀಗ ಇಡೀ ವಿಶ್ವದಲ್ಲೇ ಅತ್ಯಂತ ವಿನೂತನ ಹಾಗೂ ವಿಶಿಷ್ಟ ಹವಾಮಾನ ಮುನ್ಸೂಚನಾ ವ್ಯವಸ್ಥೆಯಾಗಿ ರೂಪುಗೊಂಡಿದೆ. 1990ರ ಮೇ 9ರಂದು ಆಂಧ್ರಪ್ರದೇಶದ ಮೇಲೆ ಅಪ್ಪಳಿಸಿದ ಚಂಡಮಾರುತದ ವೇಳೆ ಈ ವ್ಯವಸ್ಥೆಯನ್ನು ಸಮಗ್ರ ಹಾಗೂ ಸಮರ್ಪಕವಾಗಿ ಬಳಸಿಕೊಂಡ ಪರಿಣಾಮವಾಗಿ 1.70 ಲಕ್ಷ ಮಂದಿಯನ್ನು ಸ್ಥಳಾಂತರಿಸಿ, ಈ ಪ್ರದೇಶದ ಸಾವಿರಾರು ಜೀವಗಳನ್ನು ಮತ್ತು ಜಾನುವಾರುಗಳನ್ನು ಉಳಿಸಲು ಸಾಧ್ಯವಾಯಿತು. ಬಾಹ್ಯಾಕಾಶ ವಲಯದ ಸಾಮರ್ಥ್ಯ ಅಭಿವೃದ್ಧಿಯಾದಂತೆ, ಹೆಚ್ಚುವರಿ ವಿಕೋಪ ಮುನ್ಸೂಚನಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಯಿತು. ಇದರ ಜತೆಗೆ ದೇಶದ ವಿವಿಧ ನದಿಗಳ ಪ್ರವಾಹಮಟ್ಟವನ್ನು ಗಮನಿಸುವ ವ್ಯವಸ್ಥೆಯನ್ನೂ ಆರಂಭಿಸಲಾಯಿತು.

ಇನ್ಸಾಟ್‌ನ ನಾಟಕೀಯ ಪರಿಣಾಮದ ಇನ್ನೊಂದು ನಿದರ್ಶನವೆಂದರೆ ದೇಶದಲ್ಲಿ ಟಿವಿ ಪ್ರಸಾರ ಜಾಲವನ್ನು ಅಭಿವೃದ್ಧಿಪಡಿಸಲು ಸಾಧ್ಯವಾದದ್ದು. ಇದುವರೆಗೆ ದೇಶದಲ್ಲಿ 540 ಟಿವಿ ಚಾನಲ್‌ಗಳು ತಮ್ಮ ಪ್ರಸಾರ ಘಟಕಗಳನ್ನು ದೇಶದಲ್ಲಿ ಹೊಂದಿವೆ. ಈ ಮೂಲಕ ದೇಶದ 80 ಶೇಕಡ ಜನರನ್ನು ಈ ಟಿವಿಗಳು ತಲುಪುವುದು ಸಾಧ್ಯವಾಗಿದೆ. ಪ್ರಾದೇಶಿಕ ಜಾಲ ವ್ಯವಸ್ಥೆಯನ್ನು ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳದಲ್ಲಿ ಈಗಾಗಲೇ ಜಾರಿಗೊಳಿಸಲಾಗಿದೆ. ಈ ವ್ಯವಸ್ಥೆಯನ್ನು ಗುಜರಾತ್ ಹಾಗೂ ಈಶಾನ್ಯ ರಾಜ್ಯಗಳಿಗೆ ವಿಸ್ತರಿಸುವ ಯೋಜನೆಗಳು ಜಾರಿಯಲ್ಲಿವೆ. ವರ್ಗಾವಣೆ ಮಾಡಬಹುದಾದ ಐದು ಟಿವಿ ಅಪ್‌ಲಿಂಕಿಂಗ್ ಸ್ಟೇಷನ್‌ಗಳನ್ನು ಒಳಗೊಂಡ ಚಲಿಸುವ ಭೂಕೇಂದ್ರಗಳನ್ನು ಅಭಿವೃದ್ಧಿಪಡಿಸಿರುವುದರಿಂದ ದೇಶದ ಯಾವುದೇ ಮೂಲೆಯಲ್ಲಿ ನಡೆಯುವ ಘಟನೆಗಳನ್ನೂ ನೇರಪ್ರಸಾರ ಮಾಡಲು ಸಾಧ್ಯವಾಗುತ್ತದೆ. ಇನ್ಸಾಟ್ ಉಪಗ್ರಹವನ್ನು ಶೈಕ್ಷಣಿಕ ಟಿವಿ ಪ್ರಸಾರಕ್ಕೆ ಕೂಡಾ ವ್ಯಾಪಕವಾಗಿ ಬಳಕೆ ಮಾಡಲಾಗುತ್ತಿದೆ. ತಿಂಗಳಿಗೆ ಸುಮಾರು 100 ಗಂಟೆ ಕಾರ್ಯಕ್ರಮವನ್ನು 4000ಕ್ಕೂ ಹೆಚ್ಚು ಶಾಲಾ ಕಾಲೇಜುಗಳಿಗೆ ಪ್ರಸಾರ ಮಾಡಲಾಗುತ್ತಿದೆ.

ರೇಡಿಯೊ ನೆಟ್‌ವರ್ಕಿಂಗ್ ಸೇವೆಯನ್ನು ಇನ್ಸಾಟ್ ಮೂಲಕ ನೀಡುತ್ತಿರುವುದರಿಂದ ಅತ್ಯಂತ ವಿಶ್ವಾಸಾರ್ಹ, ಗರಿಷ್ಠ ಸಾಮರ್ಥ್ಯದ 108 ಕೇಂದ್ರಗಳನ್ನು ದೇಶಾದ್ಯಂ ಸ್ಥಾಪಿಸಲು ಸಾಧ್ಯವಾಗಿದೆ. ಅತ್ಯಾಧುನಿಕ ಆರ್‌ಎನ್ ಅಪ್‌ಲಿಂಕಿಂಗ್ ಟರ್ಮಿನಲ್‌ಗಳನ್ನು ಅಳವಡಿಸುವುದರೊಂದಿಗೆ ಇದು ಸಾಧ್ಯವಾಗಿದೆ. ನಾಗಪುರದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಬಾನುಲಿ ಸೇವೆಗೆ ಪೂರಕವಾಗಿ ಐದು ಆರ್‌ಎನ್ ರೇಡಿಯೊ ಚಾನಲ್‌ಗಳ ಮಾಸಿಕ ಪ್ರಸಾರ 2400 ಗಂಟೆಗಳನ್ನು ಮೀರಿದೆ.

ಪುಟ್ಟ ಡಿಶ್ ಆಂಟೆನಾಗಳ ಮೂಲಕ ವಿಡಿಯೊ/ ಆಡಿಯೊ ಕಾರ್ಯಕ್ರಮಗಳ ನೇರಪ್ರಸಾರ, ಹೈಡೆಫಿನಿಷನ್ ಟಿವಿ, ಡಿಜಿಟಲ್ ವಿಡಿಯೊ ಮತ್ತು ಆಡಿಯೊ ಸಿಸ್ಟಂಗಳ ಹೆಚ್ಚುವರಿ ಬಳಕೆ, ಕಂಪ್ಯೂಟರ್‌ಗಳ ಅಂತರ್ ಸಂಪರ್ಕ, ವೈಯಕ್ತಿಕ ಬಳಕೆದಾರರು ಕೂಡ ಯಾವುದೇ ಮಾಹಿತಿಗಳನ್ನು ಪಡೆಯಲು ವ್ಯವಸ್ಥೆ, ಗ್ರಂಥಾಲಯ ಸೇವೆಯಂಥ ಹಲವು ಪವಾಡಗಳು ಉಪಗ್ರಹ ತಂತ್ರಜ್ಞಾನದಿಂದಾಗಿ ಸಾಧ್ಯವಾಗಿದೆ. ಗರಿಷ್ಠ ಪ್ರಮಾಣದ ಸಂಸ್ಕರಣಾ ಸಾಮರ್ಥ್ಯದ ಟವರ್, ಸಂಗ್ರಹಣಾ ಸಾಮರ್ಥ್ಯ ಮತ್ತು ಉತ್ತಮ ಗುಣಮಟ್ಟದ ಸೇವೆ ಸಾಧ್ಯವಾಗಿದೆ. ಮುಂದಿನ ದಶಕದಲ್ಲಿ ಸಂಕೇತ ವ್ಯವಸ್ಥೆ ಮತ್ತು ವಿಡಿಯೊ ಕಂಪ್ರೆಷನ್ ತಂತ್ರಜ್ಞಾನದಲ್ಲಿ ಕ್ರಾಂತಿ ಹುಟ್ಟುಹಾಕಲಿದೆ. ಇದರ ಮೂಲಕ ವಿಡಿಯೊಗಳನ್ನು ತೀರಾ ಕಡಿಮೆ ವೆಚ್ಚದಲ್ಲಿ ವರ್ಗಾವಣೆ ಮಾಡಲು ಸಾಧ್ಯವಾಗಲಿದೆ. ಇದರ ಮೂಲಕ ಅತ್ಯಂತ ಮಿತವ್ಯಯ ಸಾಧಿಸಲು ಸಾಧ್ಯವಾಗಲಿದೆ. ಇನ್ಸಾಟ್–2 ಸರಣಿಯಲ್ಲಿ ಮತ್ತೆ ನಾಲ್ಕು ಹೊಸ ಉಪಗ್ರಹಗಳನ್ನು ಉಡಾಯಿಸಿರುವುದರಿಂದ ದೇಶಕ್ಕೆ ಸಾಕಷ್ಟು ಬಾಹ್ಯಾಕಾಶ ವಲಯ ಸಾಮರ್ಥ್ಯ ಲಭಿಸಿದೆ. ದೇಶದಲ್ಲಿ ಯಾವುದೇ ಅಗತ್ಯತೆಗಳನ್ನು ಪೂರೈಸುವಷ್ಟು ಸಾಮರ್ಥ್ಯವನ್ನು ನಮ್ಮ ಉಪಗ್ರಹ ತಂತ್ರಜ್ಞಾನ ಪಡೆದುಕೊಂಡಿದೆ.

ಗ್ರಾಮೀಣ ಪ್ರದೇಶದಲ್ಲಿ ಅನಕ್ಷರತೆ ನಿರ್ಮೂಲನೆಯನ್ನು ಪವಾಡಸದೃಶವಾಗಿ ಸಾಧಿಸಲು ಸಾಧ್ಯವಾಗದಿದ್ದರೆ, ಮುಂದಿನ ವರ್ಷಗಳಲ್ಲೂ ಶೇಕಡ 30ರಷ್ಟು ಅನಕ್ಷರತೆ ಉಳಿದುಕೊಳ್ಳುವ ಅಪಾಯವಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ಗ್ರಾಮಸ್ಯಾಟ್ ಯೋಜನೆಯ ಮೂಲಕ ದೃಶ್ಯ–ಶ್ರಾವ್ಯ ಮಾಧ್ಯಮವನ್ನು ಬಳಸಿಕೊಂಡು ಗ್ರಾಮೀಣ ಜನತೆಗೆ ಬೋಧನೆ ಮಾಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಇದರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಸಂಸ್ಕೃತಿ, ಪ್ರದೇಶಕ್ಕೇ ಸೀಮಿತವಾದ ಆರೋಗ್ಯ ಮಾಹಿತಿ, ನೈರ್ಮಲ್ಯ, ಪರಿಸರ, ಕುಟುಂಬ ಯೋಜನೆ, ಉತ್ತಮ ಕೃಷಿಪದ್ಧತಿಯನ್ನು ಆಯಾ ಪ್ರಾದೇಶಿಕ ಭಾಷೆಯಲ್ಲಿ ಪ್ರಸಾರ ಮಾಡಲು ಸಾಧ್ಯವಾಗಲಿದೆ. ಇದರ ಜತೆಗೆ ಗ್ರಾಮಸ್ಯಾಟ್ ಯೋಜನೆಯ ಮೂಲಕ ನಿರ್ದಿಷ್ಟ ವಿಶೇಷ ಗುಂಪಿನ ಜನರಿಗೆ ತಾಂತ್ರಿಕ ಕೌಶಲದ ನಿರಂತರ ಮಾಹಿತಿಯನ್ನು ಒದಗಿಸಲು ಕೂಡಾ ಯೋಜನೆ ಸಿದ್ಧವಾಗಿದೆ. ಗ್ರಾಮೀಣ ಪ್ರದೇಶದ ಜನ ತಂತ್ರಜ್ಞಾನ ಅಭಿವೃದ್ಧಿಯ ಜ್ಞಾನದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ನಿಯತವಾಗಿ ಈ ಕುರಿತ ಮಾಹಿತಿಗಳನ್ನು ನೀಡುವುದು ಇದರ ಉದ್ದೇಶ. ಭಾಷಾ ಅಲ್ಪಸಂಖ್ಯಾತರು ಕೂಡಾ ತಮ್ಮದೇ ಭಾಷೆಯಲ್ಲಿ ಇಂಥ ಅಗತ್ಯ ಮಾಹಿತಿ ಹಾಗೂ ಕಾರ್ಯಕ್ರಮಗಳನ್ನು ಪಡೆಯುವುದು ಇದರಿಂದ ಸಾಧ್ಯವಾಗಲಿದೆ.

ಕಳೆದ ಎರಡು ದಶಕಗಳಲ್ಲಿ ಭಾರತದ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿಕಾರಕ ಬದಲಾವಣೆಗಳನ್ನು ಗಮನಿಸಿದರೆ, ಭಾರತೀಯ ಸಮಾಜದ ಮೇಲೆ ಅದು ಬೀರಿರುವ ಪರಿಣಾಮವನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಜನಸಾಮಾನ್ಯರ ದೈನಂದಿನ ಬದುಕಿನಲ್ಲಿ ಕೂಡಾ ಉಪಗ್ರಹ ತಂತ್ರಜ್ಞಾನ ಇದೀಗ ಅನಿವಾರ್ಯ ಮತ್ತು ಅವಿಭಾಜ್ಯ ಅಂಗವಾಗಿ ಬೆಳೆದಿದೆ. ದೂರಸಂಪರ್ಕ ವ್ಯವಸ್ಥೆಯ ವಿಸ್ತೃತ ದೇಶವ್ಯಾಪಿ ಜಾಲ, ಟೆಲಿವಿಷನ್ ಸೇವೆಯಲ್ಲಿ ಗಣನೀಯ ಸುಧಾರಣೆ, ಹವಾಮಾನ ಮುನ್ಸೂಚನೆಯಲ್ಲಿ ಕ್ರಾಂತಿಕಾರಿ ಬದಲಾವಣೆ, ವಿಕೋಪ ಮುನ್ಸೂಚನೆ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಬಗ್ಗೆ ಸಮಗ್ರ ಮಾಹಿತಿ ಹೀಗೆ ಹತ್ತುಹಲವು ಕ್ಷೇತ್ರಗಳಲ್ಲಿ

UniversalCoachingCentre



www.shikarat.com

ಇದರ ಪ್ರಯೋಜನ ಕಂಡುಬರುತ್ತಿದೆ. ಭಾರತ ಹೊಸ ಶತಮಾನವನ್ನು ಪ್ರವೇಶಿಸುವ ಹಂತದಲ್ಲಿ, ಬಾಹ್ಯಾಕಾಶ ತಂತ್ರಜ್ಞಾನದ ಪ್ರಯೋಜನವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಹಾಗೂ ಸಂಶೋಧನೆ ಮುಂದುವರಿಯಬೇಕಿದೆ. ದೇಶದ ನಿರಂತರ ಸಮಸ್ಯೆಗಳು ಎನಿಸಿದ ಹಸಿವು ಮತ್ತು ಅನಕ್ಷರತೆಯನ್ನು ಹೊಡೆದೋಡಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸಬೇಕಿದೆ. ಇದು ಸಾಧ್ಯವಾದಲ್ಲಿ ಪ್ರಬಲ ಹಾಗೂ ಆರೋಗ್ಯಪೂರ್ಣ ಸಮಾಜದ ಅಭಿವೃದ್ಧಿ ಸಾಧ್ಯ.

---

## 36. ಮಾಹಿತಿ ಕ್ರಾಂತಿ ವರವೇ, ಹೊರೆಯೇ?

ಇಪ್ಪತ್ತನೇ ಶತಮಾನ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಕಂಡಿದೆ. ಆದರೆ ಇದರ ಪ್ರತಿಫಲ ವರವೇ ಅಥವಾ ಶಾಪವೇ ಎನ್ನುವುದು ಚರ್ಚಾರ್ಹ ವಿಷಯ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಗಮನಾರ್ಹವಾಗಿ ಪ್ರಗತಿ ಕಂಡಿದೆ. ಮಾಹಿತಿ ತಂತ್ರಜ್ಞಾನ ಕ್ರಾಂತಿ ಆರಂಭವಾದದ್ದು ನಮ್ಮ ಕಾಲದಲ್ಲಲ್ಲ. ಮನುಷ್ಯ ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಕಾಲದಲ್ಲೂ ತನ್ನ ವಾಸದ ಗುಹೆಗಳಲ್ಲಿ ಪ್ರಾಣಿಗಳ ಚಿತ್ರಗಳ ಚಿತ್ತಾರ ಬಿಡಿಸುವಲ್ಲಿಂದ ಇದರ ಮೂಲ ಆರಂಭವಾಗಿದೆ. 19ನೇ ಶತಮಾನದಲ್ಲಿ ಆಟೊಮೊಬೈಲ್ ಉದ್ಯಮದ ಜತೆಜತೆಗೆ ಟೆಲಿಗ್ರಾಫ್, ಟೆಲಿಫೋನ್, ಕ್ಯಾಮರಾ ಹೀಗೆ ವಿಶಿಷ್ಟ ತಂತ್ರಜ್ಞಾನಕ್ಕೆ ಮುನ್ನುಡಿ ಬರೆಯಿತು. ಆದರೆ ನಮ್ಮ 20ನೇ ಶತಮಾನದಲ್ಲಿ ಇದಕ್ಕೆ ಊಹೆಗೂ ನಿಲುಕದಷ್ಟು ವೇಗ ದೊರೆಯಿತು. ಈ ಶತಮಾನದಲ್ಲಿ ವಿಮಾನ, ರೇಡಿಯೊ, ಟೆಲಿವಿಷನ್, ಉಪಗ್ರಹ ಸಂಪರ್ಕ ಹಾಗೂ ಅನ್ಯಗ್ರಹಗಳಿಗೆ ಯಾನದಂಥ ಅತ್ಯಮೋಘ ಸಾಧನೆಗಳಾದವು. ಮನುಷ್ಯ ಈಗ ಬೆಳಕಿನಷ್ಟೇ ವೇಗದಲ್ಲಿ ಕೇಳಬಲ್ಲ, ಮಾತನಾಡಬಲ್ಲ ಮತ್ತು ನೋಡಬಲ್ಲ. ಎಲ್ಲರನ್ನೂ ಹತ್ತಿರಕ್ಕೆ ತಂದು ಇಡೀ ವಿಶ್ವವನ್ನೇ ಜಾಗತಿಕ ಗ್ರಾಮವಾಗಿ ಪರಿವರ್ತಿಸುವಲ್ಲಿ ಮಾಹಿತಿ ತಂತ್ರಜ್ಞಾನ ಸಫಲವಾಗಿದೆ. ಇದರ ಜತೆಜತೆಗೆ ಸಾಂಸ್ಕೃತಿಕ ದಾಳಿ ಹಾಗೂ ಖಾಸಗೀತನದ ಉಲ್ಲಂಘನೆಯಂಥ ವ್ಯತಿರಿಕ್ತ ಪರಿಣಾಮಗಳು ಕೂಡಾ ಇದೇ ಕ್ರಾಂತಿಯ ಫಲ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಮಾಹಿತಿ ತಂತ್ರಜ್ಞಾನ ಕ್ರಾಂತಿಯ ಎರಡು ವಿಭಿನ್ನ ಧ್ರುವಗಳೆಂದರೆ, ಒಂದೆಡೆ ಎಷ್ಟೊಂದು ಮನೋರಂಜನೆ ಮತ್ತು ಅದನ್ನು ಅನುಭವಿಸುವುದು ಸಾಧ್ಯವಾಗಿದ್ದರೆ ಇನ್ನೊಂದೆಡೆ, ಇಂಥ ಬೆಳವಣಿಗೆಗಳು ನಮ್ಮ ಜ್ಞಾನಕ್ಕೆ ಎಷ್ಟರಮಟ್ಟಿಗೆ ಪೂರಕವಾಗಿದೆ ಎನ್ನುವುದು ಕುಡಾ ಪ್ರಶ್ನಾರ್ಹವಾಗಿದೆ. ಆದರೆ ಮಾನವನ ಇತರ ಎಲ್ಲ ಸಂಶೋಧನೆಗಳಂತೆ ಮಾಹಿತಿ ತಂತ್ರಜ್ಞಾನ ಕ್ರಾಂತಿಯ ಬಳಕೆ ಹಾಗೂ ದುರ್ಬಳಕೆಯೂ ಆಗಿದೆ.

ತಂತ್ರಜ್ಞಾನ ಹಾಗೂ ಜೀವನಶೈಲಿ ಬದಲಾಗಿದೆ. ಇದು ಖಂಡಿತವಾಗಿಯೂ ವರ ಎನ್ನುವುದಕ್ಕಿಂತ ಹೆಚ್ಚಿನ ಹೊರೆಯಾಗಿ ಪರಿಣಮಿಸಿದೆ. ಅದು ಎಷ್ಟರ ಮಟ್ಟಿಗೆ ಪ್ರಯೋಜನವನ್ನು ತಂದುಕೊಟ್ಟಿದೆಯೋ ಅದಕ್ಕಿಂತ ಹೆಚ್ಚು ಹಾನಿಯನ್ನು ಮಾಡಿದ್ದು, ಸಮಸ್ಯೆಗಳ ಸುಳಿಯಲ್ಲಿ ಮನುಕುಲವನ್ನು ಸಿಲುಕಿಸಿದೆ. ಅಂತಿಮವಾಗಿ ಇದು ಮನುಷ್ಯನ ಅನಂದವನ್ನು ಕಿತ್ತುಕೊಂಡಿದೆ. ಇಪ್ಪತ್ತನೇ ಶತಮಾನ ಖಂಡಿತವಾಗಿಯೂ ಸಾಧನೆಯ ಶತಮಾನ. ಅದರ ಹೊರತಾಗಿಯೂ ಬೇರೆ ಬೇರೆ ಖಂಡಗಳ ಮೇಲೆ ಪ್ರಭುತ್ವ ಸ್ಥಾಪಿಸಿದ್ದ ಯೂರೋಪಿಯನ್ ಚಕ್ರಾಧಿಪತ್ಯದ ಪತನ ಈ ಶತಮಾನದ ಇನ್ನೊಂದು ಗಮನಾರ್ಹ ಬೆಳವಣಿಗೆ. ಇದೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದು ವಿನಾಶವನ್ನೂ ಕಂಡ ಇನ್ನೊಂದು ಚಕ್ರಾಧಿಪತ್ಯವೆಂದರೆ, ಸೋವಿಯತ್ ಯೂನಿಯನ್. ಒಂದು ಅಣು ಸ್ಫೋಟಗೊಂಡು ಅದರ ಪರಿಇಣಾಮವನ್ನು ವಿಶ್ವಕ್ಕೇ ತೋರಿಸಿಕೊಟ್ಟದ್ದು ಕೂಡಾ ಈ ಶತಮಾನ. ಈ ಮೂಲಕ ಒಂದು ಅತಿಸಣ್ಣ ವಸ್ತು ಕೂಡಾ ದೊಡ್ಡದೆಂದು ಬೀಗುವ ವಸ್ತುವಿನ ನಾಶಕ್ಕೆ ಕಾರಣವಾಗಬಲ್ಲದು ಎನ್ನುವುದನ್ನು ತೋರಿಸಿಕೊಟ್ಟಿತು. ಆದರೆ ಅಣುಬಾಂಬ್ ಈ ಶತಮಾನದ ಸಂಕೇತ ಮಾತ್ರವಲ್ಲ. ಇದರ ಜತೆಗೆ ಮೈಕ್ರೊಚಿಪ್‌ನಂಥ ಸಾಧನೆ ಕೂಡಾ ಇದೇ ಶತಮಾನದಲ್ಲಿ ಬಂತು. ಇಡೀ ವಿಶ್ವವನ್ನು ಒಂದು ಬೀಜರೂಪದಲ್ಲಿ ತುಂಬಿಸಿಕೊಂಡ ಸಾಧನ ಇದಾಗಿದ್ದು, ಇಡೀ ವಿಶ್ವವನ್ನು ಅಂಗೈಯಲ್ಲಿ ಆಡಿಸುವ ಯಕ್ಷಿಣಿ ಎಂದು ಕರೆಸಿಕೊಂಡಿದೆ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಗಮನಾರ್ಹವಾಗಿ ಪ್ರಗತಿ ಕಂಡಿದೆ. ಮಾಹಿತಿ ತಂತ್ರಜ್ಞಾನ ಕ್ರಾಂತಿ ಆರಂಭವಾದದ್ದು ನಮ್ಮ ಕಾಲದಲ್ಲಲ್ಲ. ಮನುಷ್ಯ ಬೇಟೆಯಾಡಿ ಜೀವನ ಸಾಗಿಸುತ್ತಿದ್ದ ಕಾಲದಲ್ಲೂ ತನ್ನ ವಾಸದ ಗುಹೆಗಳಲ್ಲಿ ಪ್ರಾಣಿಗಳ ಚಿತ್ರಗಳ ಚಿತ್ತಾರ ಬಿಡಿಸುವಲ್ಲಿಂದ ಇದರ ಮೂಲ ಆರಂಭವಾಗಿದೆ. ಆದರೆ ಮಾತು ಆರಂಭವಾದಾಗ ಇದು ಮತ್ತೊಂದು ಹೆಜ್ಜೆ ಮುಂದಕ್ಕೆ ಹೋಯಿತು. ಪ್ರಾಚೀನ ಸಮಾಜ ಮೊದಲು ಸಂಕೇತಗಳನ್ನು ಕಲ್ಲಿನಲ್ಲಿ ಕೊರೆದು, ನಂತರ ಮಡಿಕೆಗಳಲ್ಲಿ, ತಾಳೆ ಗರಿಗಳಲ್ಲಿ, ಬಟ್ಟೆ ಮತ್ತು ಕಾಗದಗಳಲ್ಲಿ ಅದನ್ನು ಮುದ್ರಿಸುವ ಮೂಲಕ ವೈಯಕ್ತಿಕ ಭಾವನೆಗಳ ಅಭಿವ್ಯಕ್ತಿಯನ್ನು ಮಾಡಲಗುತ್ತಿತ್ತು. ನಂತರ ಮರದ ಅಚ್ಚಿನಿಂದ ಮುದ್ರಣ ಮಾಡುವ ಮತ್ತು ಚಲಿಸುವ ಟೈಪ್‌ಗಳಿಂದ ಅದರ ಯಥಾ ಪ್ರತಿಗಳನ್ನು ಪಡೆಯುವ ತಂತ್ರಜ್ಞಾನ ಮೂಲಕ ಕಾಗದ ಹಾಗೂ ಪುಸ್ತಕಗಳ ಮುದ್ರಣವೂ ಆರಂಭವಾಯಿತು.

ಪುಸ್ತಕದ ಮಹತ್ವವನ್ನು ಬಹಳಷ್ಟು ಬೇಗನೇ ಅರಿಯಲಾಯಿತು. ವೇದ ಪುಸ್ತಕಗಳು, ಧರ್ಮಪದ ಎನ್ನುವುದು ಪುಸ್ತಕ, ಬೈಬಲ್ ಅಥವಾ ಕುರ್ರಾನ್ ಕೂಡಾ ಪುಸ್ತಕಗಳೇ. ಬೆಕಾನ್ ಪುಸ್ತಕಗಳ ಬಗ್ಗೆ ಹೇಳಿರುವಂತೆ, "ಅದು ಇತರರ ಮನಸ್ಸಿನಲ್ಲಿ ಬೀಜವನ್ನು ಬಿತ್ತುವ, ಅಸಂಖ್ಯಾತ ಕ್ರಿಯೆಗಳನ್ನು ಉತ್ತೇಜಿಸುವ ಮತ್ತು ಅದಕ್ಕೆ ಕಾರಣವಾಗುವ, ಅಭಿಪ್ರಾಯಗಳನ್ನು ನಿಯತವಾಗಿ ಮೂಡಿಸುವ ಸಾಮರ್ಥ್ಯ ಹೊಂದಿವೆ". ಪುಸ್ತಕ ಎನ್ನುವುದು ಖಂಡಿತವಾಗಿಯೂ ಒಬ್ಬನ ಸುರಕ್ಷಿತ ಅಥವಾ ಸಂಘರ್ಷದ ಯೋಚನೆಗಳನ್ನು ಅಭಿವ್ಯಕ್ತಪಡಿಸುವ ಮಾಧ್ಯಮವಲ್ಲ. ಅದಕ್ಕೆ ಯಾವುದೇ ಅಧಿಕಾರ ಅಥವಾ ವಿಧಿವಿಧಾನಗಳ ಯೋಚನೆಯನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮವೂ ಹೌದು. ಆದ್ದರಿಂದಲೇ ಇತಿಹಾಸದಲ್ಲಿ ಬಹಳಷ್ಟು ಚರ್ಚ್‌ಗಳು ಮತ್ತು ಸರ್ಕಾರಗಳು ಇವುಗಳ ಪ್ರಸಾರದ ಮೇಲೆ ನಿಷೇಧ ಹೇರಿ, ಪುಸ್ತಕಗಳು ಪ್ರಸಾರವಾಗುವ ಮುನ್ನವೇ ಅವುಗಳನ್ನು ಸುಟ್ಟುಹಾಕಿದ ಘಟನೆಗಳು ಸಾಕಷ್ಟು ಸಿಗುತ್ತವೆ. ಮುದ್ರಣ ಸಂಶೋಧಕ ಗುಟೆನ್‌ಬರ್ಗ್ ಹಾಗೂ ಆತನ ಸಹಚರರು ಕಂಡುಕೊಂಡ ಈ ವಿಧಾನವನ್ನು ನಿಯಂತ್ರಿಸುವ ಪ್ರಯತ್ನಗಳು ಇತಿಹಾಸದುದ್ದಕ್ಕೂ ಕಂಡುಬರುತ್ತಿವೆ.

ಈ ಸಂವಹನ ದೈತ್ಯ ಹತ್ತೊಂಬತ್ತನೆಯ ಶತಮಾನದಲ್ಲೇ ಬೆಳವಣಿಗೆ ಆರಂಭಿಸಿತು. ಆಟೊಮೊಬೈಲ್ ತಂತ್ರಜ್ಞಾನದ ಜತೆಜತೆಗೆ ಟೆಲಿಗ್ರಾಫ್, ಟೆಲಿಫೋನ್ ಮತ್ತು ಕ್ಯಾಮರಾ ಶೋಧನೆಯೂ ಆಯಿತು. ಆದರೆ ನಮ್ಮ 20ನೇ ಶತಮಾನದಲ್ಲಿ ಇದಕ್ಕೆ ಊಹೆಗೂ ನಿಲುಕದಷ್ಟು


www.shikarat.com